ಬೆಂಗಳೂರು,
ಕೋಲಾರ,
ಹಾಸನ,
ಚಿತ್ರದುರ್ಗ,
ದಾವಣಗೆರೆ,
ವಿಜಯನಗರ,
ಬಳ್ಳಾರಿ,
ರಾಯಚೂರು,
ವಿಜಯಪುರ,
ಕಲಬುರ್ಗಿ

ದಶಕದ ನಡಿಗೆ...

# ಸಹಾಯ ವಾಣಿ

RNI No: KARKAN/2014/54928

ನೊಂದವರ ಧ್ವನಿ

www.sahayavani.com SAHAYAVANI

Postal Registration N.o KA/BGW--1862/2024-26

KANNADA DAILY PAPER

ಕನ್ನಡ ದಿನಪತ್ರಿಕೆ

ಸಂಪುಟ: 11 Vol:11
ಸಂಚಿಕೆ: 134 Issuse:134
ದಿನಾಂಕ:30-06-2024 Date:30-06-2024
ರವಿವಾರ Sunday
ಪುಟ:4 Page:4
ರೂ.: 3-00 Rs.3-00

ಸಂಪಾದಕರು: ಎಸ್.ಕೆ.ಒಡೆಯರ್ ಉಪಸಂಪಾದಕರು: ಸುಚಿತ್ರ ಎಸ್. ಒಡೆಯರ್ ಎಂಬಿಎ ಗೌರವ ಸಂಪಾದಕರು: ಗುರುರಾಜು ಎಂ., ಫೋ: 080-31212322 ಮೊ.: 9902543494 E-mail:sahayavany@gmail.com



## ಚಾಂಪಿಯನ್ ಪಟ್ಟಕ್ಕೆ ಭಾರತ-ದ.ಆಫ್ರಿಕಾ ಕಾದಾಟ

ಬಾರ್ಬೊಡೊಸ್:-

ಕೆರೆಬಿಯನ್ ನಾಡಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಕ್ರಿಕೆಟ್ ಕದನ ಇದೀಗ ರೋಚಕ ಘಟ್ಟ ತಲುಪಿದೆ. ಗೆಲುವಿನ ಮಾಲೆ ಯಾರಿಗೆ ಎಂಬುದು ಕುತೂಹಲಕ್ಕೆ ಎಡೆಮಾಡಿಕೊಟ್ಟಿದೆ. ಹರಿಣಗಳು ಮತ್ತು ಟೀಮ್ ಇಂಡಿಯಾ ನಡುವಿನ ಈ ಸೆಣಸಾಟ ಕ್ರಿಕೆಟ್ ಅಭಿಮಾನಿಗಳನ್ನು ಉಸಿರು ಬಿಗಿ ಹಿಡಿಯುವಂತೆ ಮಾಡಿದೆ. ಹಾಗೆ ನೋಡಿದರೆ ಎರಡೂ ತಂಡಗಳು



### ಗೆದ್ದು ಬಾ ಇಂಡಿಯಾ

ಟೂರ್ನಿಯಲ್ಲಿ ಸೋಲಿಲ್ಲದ ಸರದಾನಾಗಿ ವಿಜೃಂಭಿಸಿದೆ. ಆದರೆ ಇಂದಿನ ಕಾದಾಟದಲ್ಲಿ ಎರಡೂ ತಂಡಗಳ ಪೈಕಿ ಒಂದು ಸೋಲಲೇಬೇಕಾಗಿದೆ. ಹೀಗಾಗಿ ಚಾಂಪಿಯನ್ ಪಟ್ಟ ಯಾರಿಗೆ ? ಯಾವ ತಂಡ ಗೆಲ್ಲಲಿದೆ ಎಂಬುದು ಕೌತುಕಕ್ಕೆ ಕಾರಣವಾಗಿದೆ.ಈ ಜಿದ್ದಾಜಿದ್ದಿನ ಹಣಾಹಣಿಯನ್ನು ಕಣ್ತುಂಬಿಕೊಳ್ಳಲು ಕ್ರಿಕೆಟ್ ಅಭಿಮಾನಿಗಳು ತುದಿಗಾಲಲ್ಲಿ ನಿಂತಿದ್ದಾರೆ. ಅಷ್ಟೆ ಏಕೆ ಒಂದೆಡೆ ಸೋಲು, ಗೆಲುವಿನ ಲೆಕ್ಕಾಚಾರ, ಇನ್ನೊಂದೆಡೆ ಬೆಟ್ಟಿಂಗ್ ಭರಾಟೆ ಬಲು ಜೋರಾಗಿದೆ. ಇವೆಲ್ಲದರ ನಡುವೆ ಟೀಂ ಇಂಡಿಯಾ ಗೆದ್ದು ಬಾ ಇಂಡಿಯಾ ಎಂದು ಪ್ರಾರ್ಥಿಸಿ ಕೋಟ್ಯಾಂತರ ಅಭಿಮಾನಿಗಳು ದೇಶದ ವಿವಿಧ ದೇವಾಲಯಗಳಲ್ಲಿ ಹೋಮ, ಹವನ ಪೂಜೆ ಪುನಸ್ಕಾರ ನಡೆಸಿದರು.ದಕ್ಷಿಣ ಆಫ್ರಿಕಾ ಎದುರು ಬ, ಾ ರ ತ -3ನೇ ಪುಟಕ್ಕೆ

# ಬಾಯಿಬಿಟ್ಟರೆ ಜೋಕೆ: ಡಿಕೆಶಿ

## ಸಿಎಂ, ಡಿಸಿಎಂ ಹುದ್ದೆ ಜಟಾಪಟಿ, ಬಹಿರಂಗ ಹೇಳಿಕೆ ಕೊಟ್ಟರೆ ಶಿಸ್ತುಕ್ರಮ



ಬೆಂಗಳೂರು:-

ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಲೀ, ಉಪಮುಖ್ಯ ಮಂತ್ರಿ ಹುದ್ದೆ ಸೃಷ್ಟಿ ಬಗ್ಗೆಯಾಗಲೀ ಪಕ್ಷದಲ್ಲಿ ಯಾರೂ ಬಹಿರಂಗವಾಗಿ ಮಾತನಾಡಬಾರದು. ಬಾಯಿಗೆ ಬೀಗ ಹಾಕಿಕೊಳ್ಳಬೇಕು. ಇಲ್ಲದಿದ್ದರೆ ಶಿಸ್ತು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಖಡಕ್ ಎಚ್ಚರಿಕೆ ನೀಡಿದರು.

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ, ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿ ಬಗ್ಗೆ ಬಹಿರಂಗವಾಗಿ ಮಾತನಾಡುವುದು ಪಕ್ಷ-ಕ್ಕೆ ಒಳ್ಳೆಯದಲ್ಲ. ಪಕ್ಷಕ್ಕೆ ಒಳ್ಳೆಯ ದಾಗಬೇಕು ಎಂದಾದ-ರೆ ಯಾವುದೇ ಸಚಿವರಿರಲಿ, ಶಾಸಕರಿರಲಿ ಯಾರೂ ಈ ಬಗ್ಗೆ ಮಾತನಾಡಕೂಡದು. ಮಾತ ನಾಡಿದರೆ ನೋಟಿಸ್ ನೀಡಿ, ಶಿಸ್ತು ಕ್ರಮ ಕೈಗೊಳ್ಳುವುದು ಅನಿವಾರ್ಯವಾಗುತ್ತದೆ ಎಂದು ಡಿ.ಕೆ. ಶಿವಕುಮಾರ್ ಕಠಿಣ ಎಚ್ಚರಿಕೆ ನೀಡಿದರು.

ಬೆಂಗಳೂರಿನ ಸದಾಶಿವನಗರದಲ್ಲಿರುವ ತಮ್ಮ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಹಿರಂಗ ಹೇಳಿಕೆ ನೀಡುವವರು ಎಐಸಿಸಿ ಮತ್ತು ರಾಜ್ಯ ಘಟಕದಿಂದ ಶಿಸ್ತು ಕ್ರಮ ಎದುರಿಸಬೇಕಾಗುತ್ತದೆ. ಪಕ್ಷ-ಕ್ಕೆ ಶಿಸ್ತು ಮುಖ್ಯ. ಶಿಸ್ತಿಲ್ಲದೆ ಯಾವುದೇ ಪಕ್ಷವಿಲ್ಲ. ಪಕ್ಷವನ್ನು ಅಧಿಕಾರಕ್ಕೆ ತರಲು ಎಷ್ಟು ಕಷ್ಟಪಟ್ಟಿದ್ದೇವೆ ಎಂಬುದು ನಮಗೆ ಗೊತ್ತಿದೆ. ಇಂದು ಸುಖಾಸುಮ್ಮನೆ ಮಾತನಾಡುವ ಅಗತ್ಯತೆ ಇಲ್ಲ ಎಂದರು.

ಒಕ್ಕಲಿಗರ ಮಹಾಸಂಸ್ಥಾನ ಮಠದ ಚಂದ್ರಶೇಖರನಾಥ ಸ್ವಾಮೀಜಿ ಅವರು ನನ್ನ ಮೇಲೆ ಅಭಿಮಾನಕ್ಕೆ ಮುಖ್ಯಮಂತ್ರಿ ಹುದ್ದೆ ಬಿಟ್ಟುಕೊಡಿ ಎಂದು ಹೇಳಿದ್ದಾರೆ ಅಷ್ಟೆ. ನಾನು ಸ್ವಾಮೀಜಿಗಳಲ್ಲಿ ಮನವಿ ಮಾಡುತ್ತೇನೆಯಾರೂ ಈ ರೀತಿ ಮಾತನಾಡುವುದು ಬೇಡ. ನಾನು ಸಿಎಂ ಆಗಲು ನನಗೆ ಯಾರ ಶಿಫಾರಸ್ಸು ಬೇಡ. ನಾನು 35 ವರ್ಷಗಳ ಕಾಲ ಪಕ್ಷಕ್ಕಾಗಿ ದುಡಿದಿದ್ದೇನೆ, ಕೆಲಸ ಮಾಡಿದ್ದೇನೆ. ನಾನು ಮಾಡಿರುವ ಕೆಲಸವನ್ನು ನೋಡಿ ಹೈಕಮಾಂಡ್ ಸೂಕ್ತ ತೀರ್ಮಾನ ಮಾಡುತ್ತದೆ. ದಯವಿಟ್ಟು ಈ ವಿಚಾರ ಇಲ್ಲಿಗೆ ಮುಗಿಸಿಬಿಡಿ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಹೆಚ್ಚುವರಿ ಡಿಸಿಎಂ ಬಗ್ಗೆ ಕೆಲವರು ಹೇಳಿಕೆ ಕೊಡುತ್ತಿದ್ದಾರಲ್ಲಾ ಎಂದು ಕೇಳಿದ್ದಕ್ಕೆ ಇದರ ಬಗ್ಗೆ ನನಗೆ ಗೊತ್ತಿಲ್ಲ. ಪಕ್ಷದ ಹಿತದೃಷ್ಟಿಯಿಂದ ಎಲ್ಲರೂ ಬಾಯಿಗೆ ಬೀಗ ಹಾಕಿಕೊಂಡರೆ ಉತ್ತಮ. ಇಷ್ಟು ಹೇಳಿದ ಮೇಲೂ ಯಾರಾದರೂ ಮಾತನಾಡಿದರೆ ವಿಧಿ ಇಲ್ಲದೆ ನೋಟಿಸ್ ನೀಡಿ ಶಿಸ್ತು ಕ್ರಮ ಕೈಗೊಳ್ಳಲೇಬೇಕಾಗುತ್ತದೆ ಎಂದರು. ಲಿಂಗಾಯತ ಸ್ವಾಮೀಜಿಗಳು ಸೇರಿದಂತೆ ಕೆಲ ಸ್ವಾಮೀಜಿಗಳು ಸಿಎಂ ಹುದ್ದೆ ಬಗ್ಗೆ ಮಾತನಾಡುತ್ತಿದ್ದಾರಲ್ಲಾ ಎಂಬ ಪ್ರಶ್ನೆಗೆ, ಯಾವ ಸ್ವಾಮೀಜಿಗಳೂ ಮಾತನಾಡಿಲ್ಲ. ಇವತ್ತೆ ಮಾತನಾಡಿರುವುದು. ಎಲ್ಲ ಸ್ವಾಮೀಜಿಗಳಲ್ಲೂ ನಾನು ಕೈ ಮುಗಿದು ಮನವಿ ಮಾಡುತ್ತೇನೆ.ನಮ್ಮ ರಾಜಕಾರಣ ಸುದ್ದಿಗೆ ನೀವು ಬರಬೇಡಿ. ರಾಜಕಾರಣ ನಾವು ಮಾಡುತ್ತೇವೆ. ನಿಮಗೆ ಅಭಿಮಾನ ಇದ್ದರೆ ಮನಸ್ಸಿನಲ್ಲೆ ಆಶೀರ್ವಾದ ಮಾಡಿ ಎಂದು ಕೋರುತ್ತೇನೆ ಎಂದರು.

ಯಾವುದೇ ಸ್ವಾಮೀಜಿಗಳು ಎಂದೂ ಈ ರೀತಿ ಹೇಳಿಲ್ಲ. ಈಗಷ್ಟೇ ಚಂದ್ರಶೇಖರನಾಥ ಸ್ವಾಮೀಜಿ ಅವರು ಅಭಿಮಾನಕ್ಕೆ ಆ ರೀತಿ -3ನೇ ಪುಟಕ್ಕೆ

## ಆಪ್ತರ ಬಳಿ ಸಿಎಂ ಅಸಮಾಧಾನ

ಬೆಂಗಳೂರು:-

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಬಿಟ್ಟು ಕೊಡಬೇಕು ಎಂಬ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ಚಂದ್ರಶೇಖರನಾಥ ಸ್ವಾಮೀಜಿಯವರ ಮಾತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಜುಗರಕ್ಕೆ ಒಳಗಾಗಿ ತಮ್ಮ ಆಪ್ತರ ಬಳಿ ಈ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ನವದೆಹಲಿಯ ಕರ್ನಾಟಕ ಭವನದಲ್ಲಿ ನಿನ್ನೆ ಸುದ್ದಿಗೋಷ್ಠಿ ನಡೆಸಿದ ನಂತರ ಮುಖ್ಯಮಂತ್ರಿಗಳು ತಮ್ಮ ಆಪ್ತರಾದ ಕೆ.ಜೆ. ಜಾರ್ಜ್, ಪರಮೇಶ್ವರ್ ಅವರ ಜತೆ ಲಿಫ್ಟ್‌ನಲ್ಲಿ ಹೋಗುವಾಗ ಸ್ವಾಮೀಜಿಗಳಿಗೆ ಯಾರೋ ಹೇಳಿಕೊಟ್ಟು ಈ ರೀತಿ ಮಾತನಾಡಿಸಿದ್ದಾರೆ ಎಂದು ಹೇಳಿರುವ ಮಾತು ವೈರಲ್ ಆಗಿದೆ. ಮುಖ್ಯಮಂತ್ರಿಗಳ ಮಾತಿಗೆ ಪರಮೇಶ್ವರ್ ಹೌದು ಎಂದು ಪ್ರತಿಕ್ರಿಯಿಸಿರುವ ಆಡಿಯೋವೂ ಈಗ ವೈರಲ್ ಆಗಿದೆ. ಸ್ವಾಮೀಜಿಗಳ ಹೇಳಿಕೆಯಿಂದ ಮುಖ್ಯಮಂತ್ರಿಗಳು ಸ್ವಲ್ಪಮಟ್ಟಿಗೆ ಮುಜುಗರಕ್ಕೆ ಒಳಗಾಗಿದ್ದು, ಈ ಹೇಳಿಕೆ ಅವಶ್ಯಕತೆ ಅಗತ್ಯ ಇತ್ತೇ, ಸ್ವಾಮೀಜಿಗಳು ಈ ರೀತಿ ಹೇಳಿಕೆ ಕೊಡುವುದು ಸರಿಯೇ ಎಂದು ಪ್ರಶ್ನೆ ಮಾಡಿರುವ ಮುಖ್ಯಮಂತ್ರಿಗಳ ಆಪ್ತರು ಈ ರೀತಿಯ ಬೆಳವಣಿಗೆಗೆ ಅಸಮಾಧಾನ ಹೊರ ಹಾಕಿದ್ದಾರೆ.

## ಆಂಬುಲೆನ್ಸ್ ಬೈಕ್ ಡಿಕ್ಕಿ: ಮೂವರ ಸಾವು



ಶಿವಮೊಗ್ಗ:-

ಆಂಬುಲೆನ್ಸ್‌ಗೆ ಅತಿವೇಗವಾಗಿ ಬಂದು ಡಿಕ್ಕಿ ಹೊಡೆದ ಒಂದೇ ಬೈಕ್ ನಲ್ಲಿ ಹೋಗುತ್ತಿದ್ದ ಮೂವರು ಯುವಕರು ಮೃತಪಟ್ಟವರುವ ದಾರುಣ ಘಟನೆ ಶಿಕಾರಿಪುರ ತಾಲೂಕಿನ ತರಲಘಟ್ಟ ಬಳಿ ತಡರಾತ್ರಿ ಸಂಭವಿಸಿದೆ. ಹೊಸಜೋಗ ಗ್ರಾಮದ ಪ್ರಸನ್ನ (25), ಕಾರ್ತಿಕ್ (27), -3ನೇ ಪುಟಕ್ಕೆ

## ಆ. 21 ಯುಜಿಸಿ-ನೆಟ್ ಪರೀಕ್ಷೆ

ನವದೆಹಲಿ:-



ಪರೀಕ್ಷಾ ಅಕ್ರಮ ತಡೆಗಟ್ಟುವ ಹಿನ್ನೆಲೆಯಲ್ಲಿ ಮುಂದೂಡಲಾಗಿದ್ದ ಯುಜಿಸಿ-ನೆಟ್ ಪರೀಕ್ಷೆಯನ್ನು ಆಗಸ್ಟ್ 21 ಮತ್ತು ಸೆಪ್ಟೆಂಬರ್ 4 ರ ನಡುವೆ ನಡೆಸಲಾಗುವುದು ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಪ್ರಕಟಿಸಿದೆ.ಜೂನ್ 18 ರಂದು ನಡೆಯಬೇಕಾಗಿದ್ದ ಯುಜಿಸಿ-ನೆಟ್ ಪರೀಕ್ಷೆಯನ್ನು ಪತ್ರಿಕೆ ಸೋರಿಕೆಯಾದ ನಂತರ ಪರೀಕ್ಷೆಯನ್ನು ರದ್ದುಗೊಳಿಸಿದ ಒಂದು ವಾರದ ನಂತರ ಹೊಸ ದಿನಾಂಕ ಪ್ರಕಟಿಸಿದೆ.ರಾಷ್ಟ್ರೀಯ ಪರೀಕ್ಷಾ ಸಂಸ್ಥೆ, ಯುಜಿಸಿ-ನೆಟ್ ವಿಶ್ವವಿದ್ಯಾಲಯ ಅನುದಾನ ಆಯೋಗ ರಾಷ್ಟ್ರೀಯ ಅರ್ಹತಾ ಪರೀಕ್ಷೆ ಪರೀಕ್ಷೆಯನ್ನು ಸಮಗ್ರತೆಗೆ ಧಕ್ಕೆ ಯಾಗದಂತೆ ನಡೆಸಲಾಗುವುದು ಪರೀಕ್ಷಾ ಸಂಸ್ಥೆ ತಿಳಿಸಿದೆ.ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ದೋಷಮುಕ್ತ ಪರೀಕ್ಷೆ ನಡೆಸುವ -3ನೇ ಪುಟಕ್ಕೆ

## ದಾಖಲೆ ಮಳೆಗೆ ದೆಹಲಿ ತತ್ತರ ವಿದ್ಯುತ್ ಇಲ್ಲದ ಜನರ ಪರದಾಟ

ನವದೆಹಲಿ:-



ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಸುರಿದ 88 ವರ್ಷದ ದಾಖಲೆ ಮಳೆಗೆ ತತ್ತರಿಸಿದ್ದು, ಆರು ಮಂದಿ ಮೃತಪಟ್ಟಿದ್ದಾರೆ. ಜುಲೈ ಒಂದರವರೆಗೆ ಭಾರೀ ಮಳೆ ಬೀಳಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.ಈಗಾಗಲೇ ಕುಡಿಯುವ ನೀರಿನ ಸಮಸ್ಯೆಯಿಂದ ಬಸವಳಿದಿರುವ ದೆಹಲಿ ಜನತೆ, ಭಾರೀ ಮಳೆಯಿಂದಾಗಿ ನಗರದ ಹಲವು ಪ್ರದೇಶಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದು ಜನರು ಪರದಾಡುವಂತಾಗಿದೆ.ನ್ಯೂ ಉಸ್ಮಾನ್‌ಪುರ ಪ್ರದೇಶದಲ್ಲಿ ಎಂಟು ಮತ್ತು 10 ವರ್ಷ ವಯಸ್ಸಿನ ಇಬ್ಬರು ಬಾಲಕರು ಮಳೆನೀರು ತುಂಬಿದ ಹಳ್ಳದಲ್ಲಿ ಆಟವಾಡುತ್ತಿದ್ದಾಗ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಮತ್ತೊಂದು ಘಟನೆಯಲ್ಲಿ, ಶಾಲಿಮಾರ್ ಬಾಗ್ ಪ್ರದೇಶದಲ್ಲಿ ಪ್ರವಾಹಕ್ಕೆ ಒಳಗಾದ ಅಂಡರ್ಪಾಸ್‌ನಲ್ಲಿ ವ್ಯಕ್ತಿಯೊಬ್ಬ ಮುಳುಗಿ ಮತ್ತೊಬ್ಬ ವ್ಯಕ್ತಿ ಸಾವನ್ನಪ್ಪಿದ್ದಾನೆ.ವಸಂತ ವಿಹಾರ್‌ದಲ್ಲಿ ಕುಸಿದ ನಿರ್ಮಾಣ ಹಂತದ ಗೋಡೆಯ ಅವಶೇಷಗಳ ಅಡಿಯಲ್ಲಿ ಸಿಲುಕಿದ್ದ ಮೂವರು ಕಾರ್ಮಿಕರ ಪೈಕಿ ಒಬ್ಬನ ಮೃತ ದೇಹ -3ನೇ ಪುಟಕ್ಕೆ

## ದಿಢೀರ್ ಪ್ರವಾಹ ಟ್ಯಾಂಕರ್ ಅಪಘಾತ ಐವರು ಯೋಧರ ಸಾವು

ನವದೆಹಲಿ:-

ಲಡಾಕ್ ಕೇಂದ್ರಾಡಳಿತ ಪ್ರದೇಶದ ದೌಲತ್ ಬೇಗ್ ಓಲ್ಡಿ ಪ್ರದೇಶದಲ್ಲಿ ನದಿ ದಾಟುವ ತಾಲೀಮು ನಡೆಸುತ್ತಿದ್ದ ವೇಳೆ ಓರ್ವ ಜೆಸಿಒ ಮತ್ತು ನಾಲ್ವರು ಸೈನಿಕರು ಸೇರಿದಂತೆ ಐವರು ಭಾರತೀಯ ಸೇನಾ ಸಿಬ್ಬಂದಿ ಸಾವನ್ನಪ್ಪಿರುವ ದಾರುಣ ಘಟನೆ ನಡೆದಿದೆ.ಎಲ್‌ಎಸಿ ಬಳಿ ಹಠಾತ್ ಪ್ರವಾಹ ಉಂಟಾಗಿ ಟಿ.72 ಟ್ಯಾಂಕ್ ಅಪಘಾತಕ್ಕೀಡಾಗಿದೆ. ಈ ಅವಘಡ ಸಂಭವಿಸಿದೆ. ಅಪಘಾತದಲ್ಲಿ ಪ್ರಾಣ ಕಳೆದುಕೊಂಡ ಎಲ್ಲಾ ಐದು ಮೃತದೇಹಗಳನ್ನು



ಹೊರತೆಗೆಯಲಾಗಿದೆ ಎಂದು ರಕ್ಷಣಾ ಅಧಿಕಾರಿಗಳು -3ನೇ ಪುಟಕ್ಕೆ

## ಜುಲೈ 1ರಂದು ಪ್ರತಿಕಾ ದಿನಾಚರಣೆ, ವೈದ್ಯರ ದಿನಾಚರಣೆ

ಮೂಡಲಗಿ:-

ಕರ್ನಾಟಕ ಕಾರ್ಯನಿರತ ಪತರಕರ್ತರ ಸಂಘ ಮೂಡಲಗಿ ತಾಲೂಕಾ ಘಟಕದಿಂದ ಜುಲೈ 1ರಂದು ಪ್ರತಿಕಾ ದಿನಾಚರಣೆ ಹಾಗೂ ವೈದ್ಯರ ದಿನಾಚರಣೆ ನಿಮಿತ್ಯ ತಾಲೂಕಿನ ಪತ್ರಕರ್ತರಿಗೆ ಮತ್ತು ವೈದ್ಯರಿಗೆ ಸತ್ಕಾರ ಸಮಾರಂಭವನ್ನು ಪಟ್ಟಣದ ಶಿವಬೋಧರಂಗ ಅರ್ಬನ್ ಸೊಸಾಯಿಟಿಯ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕ.ಕಾ.ನಿ.ಪ ಸಂಘದ ಅಧ್ಯಕ್ಷ ಕೃಷ್ಣಪ್ಪ ಗಿರೆಣ್ಣವರ ಹೇಳಿದರು.




ಶನಿವಾರದಂದು ಪಟ್ಟಣದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಕಾರ್ಯಾಲದಲ್ಲಿ ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂಡಲಗಿ ಪಟ್ಟಣವು ತಾಲೂಕಾದ ಬಳಿಕ ಸ್ಥಾಪನೆಯಾದ ಕ.ಕಾ.ನಿ.ಪ ಸಂಘದಿಂದ ತಾಲೂಕಾ ಮಟ್ಟದಲ್ಲಿ ಉತ್ತಮವಾದ ಸಾಮಾಜಿಕ ಕಾರ್ಯ ಮಾಡುತ್ತಿದ್ದು, ಮೊದಲ ಬಾರಿ ಸಂಘ -3ನೇ ಪುಟಕ್ಕೆ

# ಎಸ್.ಸಿ-ಎಸ್.ಟಿ ದೌರ್ಜನ್ಯ ಮೇಲುಸ್ತುವಾರಿ ಸಮಿತಿ ಸಭೆ:ದೌರ್ಜನ್ಯ ಪ್ರಕರಣದಲ್ಲಿ ವಿಳಂಬವಿಲ್ಲದೆ ಪರಿಹಾರ ನೀಡಬೇಕು: ಬಿ.ಫೌಜಿಯಾ

ಕಲಬುರಗಿ:-

ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡ ದೌರ್ಜನ್ಯ ಪ್ರಕರಣದಲ್ಲಿ ಕುಟುಂಬದ ಅವಲಂಬಿತ ಸದಸ್ಯರಿಗೆ ವಿಳಂಬ ಮಾಡದೆ ತ್ವರಿತಗತಿಯಲ್ಲಿ ಪರಿಹಾರ ಒದಗಿಸಬೇಕು ಎಂದು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಸೂಚಿಸಿದರು.

ಶುಕ್ರವಾರ ಇಲ್ಲಿನ ಡಿ.ಸಿ.ಕಚೇರಿ ಸಭಾಂಗಣದಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ (ದೌರ್ಜನ್ಯ ನಿಯಂತ್ರಣ) ನಿಯಮಗಳು-1995 ರನ್ವಯ ಜಿಲ್ಲಾ ಜಾಗೃತ ಮತ್ತು ಮೇಲುಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ದೌರ್ಜನ್ಯ ಪ್ರಕರಣಗಳ ಕುರಿತು ಪರಿಶೀಲನೆ ನಡೆಸಿ ಮಾತನಾಡಿದರು.



ಪ್ರಕರಣದಲ್ಲಿ ಉದ್ಯೋಗಕ್ಕೆ ಬಾಕಿ ಇರುವ ಕಡತಗಳನ್ನು ಒಂದು ವಾರದಲ್ಲಿ ಪ್ರಸ್ತಾವನೆ ಸಲ್ಲಿಸಬೇಕು. ಪ್ರಸಕ್ತ ಸಾಲಿನಲ್ಲಿ ಪರಿಹಾರಕ್ಕೆ ಅನುದಾನ ಅವಶ್ಯಕತೆ ಇದ್ದಲ್ಲಿ ತಮಗೆ ತಿಳಿಸಿದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಜೊತೆ ಮಾತನಾಡಿ ಅನುದಾನ ತರಿಸಿಕೊಳ್ಳಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆಯ ಪ್ರಭಾರಿ ಜಂಟಿ ನಿರ್ದೇಶಕ ಮುನಾವರ್ ದೌಲಾ ಅವರಿಗೆ ಡಿ.ಸಿ. ಸೂಚಿಸಿದರು.

ಸರ್ಕಾರದ ಇತ್ತೀಚಿನ ಸುತ್ತೋಲೆ ಪ್ರಕಾರ ಎಸ್.ಸಿ-ಎಸ್.ಟಿ. ದೌರ್ಜನ್ಯ ಪ್ರಕರಣದಲ್ಲಿ ಪೊಲೀಸ್ ಇಲಾಖೆಯವರು 45 ದಿನದಲ್ಲಿಯೆ ತನಿಖೆ ಕಾರ್ಯ ಮುಗಿಸಿ ಸಮಾಜ ಕಲ್ಯಾಣ ಇಲಾಖೆಗೆ ವರದಿ ನೀಡಬೇಕಿದೆ. ಅದರಂತೆ ಮೇ ಮಾಹೆಯಲ್ಲಿ ದಾಖಲಾದ ಪ್ರಕರಣಗಳ ವರದಿ ಕೂಡಲೆ ಸಲ್ಲಿಸಬೇಕೆಂದು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದ ಜಿಲ್ಲಾಧಿಕಾರಿಗಳು, ನ್ಯಾಯಾಲಯದಲ್ಲಿಯೂ ಪ್ರಕರಣಗಳ ವಿಚಾರಣೆ ತ್ವರಿತಗತಿಯಲ್ಲಿ ಆಗುವಂತೆ ಸರ್ಕಾರಿ ಅಭಿಯೋಜಕರು ಹೆಚ್ಚು ಮುತುವರ್ಜಿ ವಹಿಸಬೇಕೆಂದರು.

ಆಗಸ್ಟನಲ್ಲಿ ಅರಿವು ಶಿಬಿರ ಆಯೋಜನೆಗೆ ಸೂಚನೆ: ಸಮಿತಿ ಸದಸ್ಯ ಚೆನ್ನಪ್ಪ ಆರ್.ಸುರಪೂರಕರ್ ಮಾತನಾಡಿ ಹಿಂದಿನ ಸಭೆಯಲ್ಲಿಯೇ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಸಮುದಾಯಕ್ಕೆ ಸರ್ಕಾರದಿಂದ ಸಿಗುವ ಸೌಲಭ್ಯ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಆಯೋಜಿಸಲು ನಿರ್ಧರಿಸಲಾಗಿತ್ತಾದರು ಇದುವರೆಗೆ ಆಗಿಲ್ಲ ಎಂದರು. ಡಿ.ಸಿ. ಬಿ.ಫೌಜಿಯಾ ತರನ್ನುಮ್ ಮಾತನಾಡಿ ಸಾರ್ವತ್ರಿಕ ಲೋಕಸಭೆ ಚುನಾವಣೆ, ವಿಧಾನ ಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ವಿಳಂಬವಾಗಿದ್ದು, ಆಗಸ್ಟ್ ಮೊದಲ ವಾರದಲ್ಲಿಯೇ ಜಿಲ್ಲೆಯ ಎಲ್ಲಾ ಸಂಘ-ಸಂಸ್ಥೆಗಳು, ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಒಂದು ದಿನದ ಅರಿವು ಶಿಬಿರ ಆಯೋಜಿಸುವಂತೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಎಸ್.ಪಿ ಅಕ್ಷಯ್ ಹಾಕೈ, ಡಿ.ಸಿ.ಪಿ. ಕನಿಕಾ ಸಿಕ್ರಿವಾಲ್, ಎ.ಸಿ.ಪಿ ಬಿಂದುಮಣಿ, ಸಮಿತಿ ಸದಸ್ಯರಾದ ಅನೀಲ ಜಾಧವ, ಮಲ್ಲಪ್ಪ ಹೊಸಮನಿ, ಸಿದ್ದಾರೂಡ ಸಮತಾ ಜೀವನ್ ಸೇರಿದಂತೆ ತಹಶೀಲ್ದಾರರು, ಪೊಲೀಸ್ ಅಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆಯ ತಾಲೂಕಾ ಹಂತದ ಅಧಿಕಾರಿಗಳು ಭಾಗವಹಿಸಿದ್ದರು.

## ಕಾವಲುಗಾರನ ಮೇಲೆ ಹಲ್ಲೆ ನಡೆಸಿ ಮೊಬೈಲ್, ಹಣ ಸುಲಿಗೆ: ಮೂವರ ಬಂಧನ

ಕಲಬುರಗಿ:-

ನಗರದ ಸ್ಕಾನಿಂಗ್ ಸೆಂಟರ್ ಒಂದರ ಮುಂದೆ ಕಾವಲುಗಾರನಾಗಿ ಕೆಲಸ ಮಾಡುತ್ತಿದ್ದ ವ್ಯಕ್ತಿಯ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿ ಸ್ಯಾಮ್‌ಸಂಗ್ ಎ12 ಮೊಬೈಲ್ ಮತ್ತು 500 ರೂ.ನಗದು ಸುಲಿಗೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಸೇರಿದಂತೆ ಮೂವರನ್ನು ಬ್ರಹ್ಮಪುರ ಪೊಲೀಸರು ಬಂಧಿಸಿದ್ದಾರೆ.



ನಗರದ ಸ್ಕಾನಿಂಗ್ ಸೆಂಟರ್ ಒಂದರ ಮುಂದೆ ಕಾವಲುಗಾರರಾಗಿ ಕೆಲಸ ಮಾಡುತ್ತಿದ್ದ ಮಿಜಗುರಿ ನಯಾ ಮೊಹಲ್ಲಾದ ಸಾಬೀರ್ ಅಹೆಮದ್ ಅವರ ಮೇಲೆ ಮೂವರು ಅಪರಿಚಿತರು ಮಚ್ಚಿನಿಂದ ಹಲ್ಲೆ ನಡೆಸಿ ಮೊಬೈಲ್ ಮತ್ತು 500 ರೂ.ನಗದು ಸುಲಿಗೆ ಮಾಡಿದ್ದರು.

ಸಾಬೀರ್ ಅಹೆಮದ್ ಅವರು ಈ ಸಂಬಂಧ ಬ್ರಹ್ಮಪುರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರು. ಈ ದೂರಿನ ಅನ್ವಯ ಡಿಸಿಪಿಗಳಾದ ಕನಿಕಾ ಸಿಕ್ರಿವಾಲ್, ಪ್ರವೀಣ್ ಹೆಚ್.ನಾಯಕ್, ದಕ್ಷಿಣ ಉಪ ವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಭೂತೆ-ೇಗೌಡ ವಿ.ಎಸ್.ಅವರ ಮಾರ್ಗದರ್ಶನದಲ್ಲಿ ಬ್ರಹ್ಮಪುರ ಪಿಐ ಸೋಮಲಿಂಗ ಕಿರದಳ್ಳಿ ಅವರ ನೇತೃತ್ವದಲ್ಲಿ ಪಿಎಸ್ಐ ಸುಭಾಷಚಂದ್ರ, ಸಿಬ್ಬಂದಿಗಳಾದ ಶಿವಪ್ರಕಾಶ, ಕೇಸುರಾಯ, ವಿಶ್ವನಾಥ, ರಾಮು ಪವಾರ, ನವೀನ್ ಕುಮಾರ್ ಅವರು ತನಿಖೆ ನಡೆಸಿ ಶೇಖ್ ಜುನ್ಹೆದ್ ತಂದೆ ಫಿರೋಜ್ ಮೀಯಾ, ಮಹ್ಮದ್ ಪರ್ವೇಜ್ ತಂದೆ ಅಬ್ದುಲ್ ಗನಿ ಶೇಖ್ ಮತ್ತು ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನೊಬ್ಬನನ್ನು ಬಂಧಿಸಿ ಸ್ಯಾಮ್ ಸಂಗ್ ಎ12 ಮೊಬೈಲ್, ಕೃತ್ಯಕ್ಕೆ ಬಳಸಿದ ಬಜಾಜ್ ಪಲ್ಸರ್ 220 ಬೈಕ್ ಜಪ್ತಿ ಮಾಡಿದ್ದಾರೆ.

## ಜಾಗತಿಕ ತಾಪಮಾನ ಕಡಿಮೆಯಾಗಲು ಪರಿಸರ ಸಂರಕ್ಷಣೆ ಅತ್ಯವಶ್ಯಕ:ಅಭಿನವ ಶಿವಲಿಂಗ ಶ್ರೀಗಳು

ಆಳಂದ:-

ತಾಲ್ಲೂಕಿನ ಮೋಘಾ.ಕೆ. ಗ್ರಾಮದಲ್ಲಿ ಕೆಚ್ಚೆದೆಯ ಸ್ನೇಹ ಲೋಕ ಪರಿಸರ ಪರಿವಾರ ಮೋಘಾ.ಕೆ.ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮೋಘಾ.ಕೆ. ಮತ್ತು ಕಲ್ಯಾಣ ಕರ್ನಾಟಕ ನ್ಯೂಸ್ ಚಾನಲ್ ಸಂಯುಕ್ತ ಆಶ್ರಯದಲ್ಲಿ 3ನೇ ವರ್ಷದ ಸಸ್ಯೋತ್ಸವ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಮಾದನ ಹಿಪ್ಪರಗ ವಿರಕ್ತಮಠದ ಶ್ರೀ ಅಭಿನವ ಶಿವಲಿಂಗ ಶ್ರೀಗಳು ವಹಿಸಿ ಜಗತ್ತಿನಲ್ಲಿ ಜಾಗತಿ-ಕ ತಾಪಮಾನ ಏರಿಕೆಯಾಗುತ್ತಿದ್ದು ಜೀವ ಸಂಕುಲಗಳಿಗೆ ಮಾರಕವಾಗಿದೆ,ಮಾನವನ ವಿಪರಿತ ದುರಾಸೆಯಿಂದ ಪರಿಸರ ಅಳಿವಿನ ಅಂಚಿನಲ್ಲಿದೆ ಮುಂದಿನ ಪೀಳಿಗೆಯ ಜೀವನ ಊಹಿಸಲಾಗದು ಎಂದರು, ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ ಮಾದನ ಹಿಪ್ಪರಗಾ ಪಿ.ಎಸ್.ಐ ದಿನೇಶರವರು ಪರಿಸರವನ್ನು ಉಳಿಸಿ ಬೆಳಸಿದರೆ ಮಾತ್ರ ಸಕಲ ಜೀವಸಂಕುಲ ಉಳಿಯಲು ಸಾಧ್ಯವೆಂದು ಹೇಳಿದರು. ಕಲ್ಯಾಣ ಕರ್ನಾಟಕ ನ್ಯೂಸ್ ಚಾನಲ್ ಸಂಪಾದಕರಾದ ಮಲ್ಲಿಕಾರ್ಜುನ ಪಗಡೆಯವರು ಮಾತನಾಡಿ ಪರಿಸರ ಉಳಿಸಿ ಬೆಳೆಸುತ್ತಿರುವ ಯುವ ಪಡೆಯ ಕಾರ್ಯ ತುಂಬಾ ಶ್ಲಾಘನೀಯವಾದದ್ದು ನಿಮ್ಮ ಕಾಯಕಕ್ಕೆ ನಮ್ಮ ಸಹಕಾರ ಸದಾ ಇರುತ್ತದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಕೆಚ್ಚೆದೆಯ ಸ್ನೇಹ ಲೋಕ ಪರಿಸರ ಪರಿವಾರ ಹುಟ್ಟುಹಾಕಿದ ಬಸವರಾಜ ಸರ್ ಮತ್ತು



ಅಗ್ನಿಶಾಮಕ ದಳದಲ್ಲಿ ಆಯ್ಕೆಯಾಗಿರುವ ಶಿವರಾಜ ಬೆಳಮಗಿಯವರನ್ನು ಸನ್ಮಾನಿಸಲಾಯಿತು.ಅಭಿನವ ಶಿವಲಿಂಗ ಶ್ರೀಗಳ ಅಮೃತ ಹಸ್ತದಿಂದ ಶಾಲಾ ಆವರಣದಲ್ಲಿ ಸಸಿ ನೆಡಲಾಯಿತು.

ಅದೆ ಸಂದರ್ಭದಲ್ಲಿ ಎಮ್.ಎ. ಆರ್.ಜಿ.ಸ್ಕಾ. ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾದ ದತ್ತಾತ್ರೇಯ ಎಸ್ ಬಿರಾದಾರ ಪರಿಸರ ಸಂರಕ್ಷಣಾವಿದಿ ಭೋಧನೆ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಎಸ್.ಡಿ.ಎಮ್.ಸಿ ಅಧ್ಯಕ್ಷರಾದ ಮಾಂತಣ್ಣ ಪೊಲೀಸ ಪಾಟೀಲ,ಅತಿಥಿಯಾಗಿ ಶರಣಗೌಡ ಪೊಲೀಸ ಪಾಟೀಲ ವಹಿಸಿಕೊಂಡರು ಮುಖ್ಯಗುರುಗಳಾದ ಸಿದ್ದಪ್ಪಾ ಹಾದಿಮನಿ ಪ್ರಾಸ್ತಾವಿಕ ಮಾತನಾಡಿದರು. ಕೆಚ್ಚೆದೆ-ಯ ಸ್ನೇಹ ಲೋಕ ಪರಿಸರ ಪರಿವಾರ ಕ್ಕೆ ಗ್ರಾಮದ ಹೊಸ ಯುವಕರು ಸೇರಿ-ಕೊಂಡರು. ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳು ಗ್ರಾಮಸ್ಥರು ಭಾಗಿಯಾಗಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಮಹೇಶ ನಡೆಸಿಕೊಟ್ಟರು.

## ಶಾಲಾಪೂರ್ವ ಶಿಕ್ಷಣ ಕುರಿತು ರಾಜಸ್ಥಾನ ತಂಡದಿಂದ ಬಿ ಬಿ ತಾಂಡಾ ಅಂಗನವಾಡಿಯಲ್ಲಿ ಅವಲೋಕನ



ಕೂಡ್ಲಿಗಿ:-

ಅಂಗನವಾಡಿ ಶಾಲೆಗಳಲ್ಲಿ ಶಾಲಾ ಪೂರ್ವ ಶಿಕ್ಷಣ ಕುರಿತಾಗಿ ರಾಜಸ್ಥಾನದ ಸಿಎಂಎಫ್ ಸಂಸ್ಥೆಯಿಂದ ಕೂಡ್ಲಿಗಿ ತಾಲೂಕಿನ ಬಂಡೇ ಬಸಾಪುರ ತಾಂಡಾದ ಅಂಗನವಾಡಿ ಡಿ ಕೇಂದ್ರದಲ್ಲಿ ಶಾಲಾ ವಾತಾವರಣ, ಅಲ್ಲಿನ ಕಲಿಕೆ, ಮಕ್ಕಳ ಪೋಷಕರ ಪ್ರೋತ್ಸಾಹ, ಪಾಲಕರ ಸಭೆ ನಡೆಸಿ ಅವರಿಂದ ವಿಷಯ ಸಂಗ್ರಹ ಕುರಿತಾಗಿ ಚರ್ಚೆ ನಡೆಸಿ ಅವಲೋಕನ ನಡೆಸಲಾಯಿತು.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಿಲ್ಲಾ ಪಂಚಾಯತ್ ವಿಜಯನಗರ ಕಲಿಕೆ ಟಾಟಾ ಟ್ರಸ್ಟ್ ಇವರ ಸಹಯೋಗದಲ್ಲಿ ಅನುಷ್ಠಾನವಾಗುತ್ತಿರುವ ಶಾಲಾ ಪೂರ್ವ ಶಿಕ್ಷಣ ಬಲವರ್ಧನೆ ಕಾರ್ಯಕ್ರಮದಡಿ ಅಂಗನವಾಡಿ ಕೇಂದ್ರಗಳಲ್ಲಿ ನಡೆಯುತ್ತಿರುವ ಶಾಲಾ ಪೂರ್ವ ಶಿಕ್ಷಣ ಚಟುವಟಿಕೆಗಳ ಕುರಿತಂತೆ ಅವಲೋಕನ ಮಾಡಲು ರಾಜಸ್ಥಾನದ ಸಿ ಎಮ್ ಎಫ್ ಸಂಸ್ಥೆಯಿಂದ ಶ್ರೀ ರಾಜೇಶ ಸಿಂಗ್ ತಂಡದವರು ಜಿಲ್ಲೆಯ ಕೂಡ್ಲಿಗಿ ಯೋಜನೆಯ ತಿಮಲಾಪುರ ಬಿ ವಲಯದ ಬಂಡೇಬಸಾಪುರ ತಾಂಡದ ಅಂಗನವಾಡಿ ಕೇಂದ್ರಗಳಲ್ಲಿ ಶಾಲಾಪೂರ್ವ ಶಿಕ್ಷಣವನ್ನು ಅವಲೋಕಿಸಿದರು ಮತ್ತು ಶಾಲಾಪೂರ್ವ ಶಿಕ್ಷಣ ಚಟುವಟಿಕೆಗಳ ಕುರಿತು ಅಂಗನವಾಡಿ ಕಾರ್ಯಕರ್ತೆಯರೊಂದಿಗೆ ಹಾಗೂ ಮೇಲ್ವಿಚಾರಕರೊಂದಿಗೆ ಚರ್ಚಿಸಿದರು, ನಂತರ ವಲಯದ ಬಂಡೇಬಸಾಪುರ ತಾಂಡದ ಅಂಗನವಾಡಿ -ಡಿ ಕೇಂದ್ರ ದಲ್ಲಿ " ಅಂಗನವಾಡಿಯತ್ತ ಸಮುದಾಯ " ಪಾಲಕ - ಪೋಷಕರ ಸಭೆಯನ್ನು ಭಾಗವಹಿಸಿ ಸಭೆಯಲ್ಲಿ ನಡೆಯುವ ವಿಷಯಗಳ ಬಗ್ಗೆ ಅವಲೋಕಿಸಿದರು ತಂಡವನ್ನು ಯೋಜನೆಯ ಹಿರಿಯ ಮೇಲ್ವಿಚಾರಕರಾದ ವಿಜಯಲಕ್ಷ್ಮಿ, ವಲಯ ಮೇಲ್ವಿಚಾರಕಿ ಅನ್ನಪೂರ್ಣ ಹಾಗೂ ರುತಿಯಾ ಬೇಗಮ್ ಸಹಕರಿಸಿದರು ಹಾಗೂ ಕಲಿಕೆ-ಟಾಟಾ ಟ್ರಸ್ಟ್ ಸಂಸ್ಥೆಯ ಗರೀಶ ಮತ್ತು ಜಗನ್ನಾಥ ಇದ್ದರು.

ವೇಲಾಪಟ್ಟೆ ಅನುಸಾರವಾಗಿ ನಡೆದ ಚಟುವಟಿಕೆಗಳನ್ನು ಅವಲೋಕಿಸಿ ಶಿಕ್ಷಕಿ ಮೀನಾಕ್ಷಿ ಮತ್ತು ಸಹಾಯಕಿ ಸದರಿ ಕಾರ್ಯದಲ್ಲಿ ಭಾಗವಹಿಸುವುದನ್ನು ಮತ್ತು ಮಕ್ಕಳ ಋಣಾತ್ಮಕ ಶಾಲಾ ಪೂರ್ವ ಶಿಕ್ಷಣ ನೀಡಲು ತರಬೇತಿ ಅನುಸಾರವಾಗಿ ಸಿದ್ದಪಡಿಸಿಕೊಂಡ ಸಾಮಾಗ್ರಿಗಳ ಶಿಕ್ಷಕಿ ಸಿದ್ದಪಡಿಸಿಕೊಂಡ ಕಲಿಕೆ ಸಾಮಗ್ರಿಗಳನ್ನು ಅವಲೋಕಿಸಿ ಮಾಹಿತಿ ಪಡೆದರು.

ನಂತರದಲ್ಲಿ ಕೂಡ್ಲಿಗಿ ಶಿಶು ಅಭಿವೃದ್ಧಿ ಯೋಜನೆ ಅಧಿಕಾರಿ ವಿಜಯಲಕ್ಷ್ಮಿ ವಲಯದ ಮೇಲ್ವಿಚಾರಕಿ ಅನ್ನಪೂರ್ಣ ಮತ್ತು ರುತಿಯಾ ಬೇಗಮ್ ಹಾಗೂ ಅಂಗನವಾಡಿ ಶಿಕ್ಷಕಿ ಮೀನಾಕ್ಷಿ ರೊಂದಿಗೆ ತರಬೇತಿ ಅನುಸಾರವಾಗಿ ತಮ್ಮ ಅನುಭವಗಳನ್ನು ಮತ್ತು ಮಕ್ಕಳ ಪೋಷಕರ ಬಗ್ಗೆ ಸದರಿ ವಿಷಯಗಳನ್ನು ಅನುಷ್ಠಾನಗೊಳಿಸುವಲ್ಲಿ ಕೈಗೊಂಡ ಬೆಳವಣಿಗೆ ಕುರಿತಂತೆ ಚರ್ಚಿಸಿದರು.

## ವಾಲ್ಮೀಕಿ ನಿಗಮದ ಹಣ ದುರ್ಬಳಕೆ: ಬಿಜೆಪಿ ಬೃಹತ್ ಪ್ರತಿಭಟನೆ



ಕಲಬುರಗಿ,ಜೂ.28-

ಮಹರ್ಷಿ ವಾಲ್ಮೀಕಿ ಎಸ್ಟಿ ಅಭಿವೃದ್ಧಿ ನಿಗಮದಲ್ಲಿನ 187 ಕೋಟಿ ದುರ್ಬಳಕೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲು ಆಗ್ರಹಿಸಿ ಬಿಜೆಪಿ ನಗರದಲ್ಲಿ ಇಂದು ಬೃಹತ್ ಪ್ರತಿಭಟನೆ ನಡೆಸಿತು.

ಶಾಸಕರಾದ ಬಸವರಾಜ ಮತ್ತಿಮೂಡ, ಡಾ.ಅವಿನಾಶ ಜಾಧವ್, ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಶಿವರಾಜ ಪಾಟೀಲ ರದ್ದೇವಾಡಗಿ, ನಗರ ಅಧ್ಯಕ್ಷ ಚಂದು ಪಾಟೀಲ, ಮುಖಂಡರಾದ ಅಮರನಾಥ ಪಾಟೀಲ ಅವರ ನೇತೃತ್ವದಲ್ಲಿ ಪಕ್ಷದ ಕಾರ್ಯಕರ್ತರು ನಗರದ ಸರ್ದಾರ ವಲ್ಲಭಭಾಯಿ ಪಟೇಲ್ ವೃತ್ತದಿಂದ ಜಿಲ್ಲಾಧಿಕಾರಿಗಳ ಕಚೇರಿಯವರೆಗೆ ಬೃಹತ್ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಈ ವೇಳೆ ಪೊಲೀಸರು ಪ್ರತಿಭಟನಾಕಾರರನ್ನು ತಡೆದು

ಶಾಸಕರಾದ ಬಸವರಾಜ ಮತ್ತಿಮೂಡ, ಡಾ.ಅವಿನಾಶ ಜಾಧವ್, ಶಿವರಾಜ ಪಾಟೀಲ ರದ್ದೇವಾಡಗಿ, ಚಂದು ಪಾಟೀಲ ಸೇರಿದಂತೆ ಮತ್ತಿತರರನ್ನು ವಶಕ್ಕೆ ಪಡೆದರು.

ಪರಿಶಿಷ್ಟ ಪಂಗಡದವರ ಕಲ್ಯಾಣಕ್ಕೆ ಬಿಡುಗಡೆಯಾದ ಹಣದ ಅವ್ಯವಹಾರ ನಡೆಸಿ ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಪಂಗಡಕ್ಕೆ ದ್ರೋಹ ಮಾಡಿದೆ. ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಹಿಂದುಳಿದ ವರ್ಗಗಳ ಸಮುದಾಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಮೀಸಲಿರಿಸಿದ್ದ ಸಾವಿರಾರು ಕೋಟಿ ರೂ.ಗಳನ್ನು ಕಾಂಗ್ರೆಸ್ ಸರ್ಕಾರ ಇತರೆ ಯೋಜನೆಗಳಿಗೆ ಬಳಸಿಕೊಂಡಿರುವುದು ಆ ಸಮುದಾಯಕ್ಕೆ ಮಾಡಿದ ಅನ್ಯಾಯವಾಗಿದೆ ಎಂದು ಪ್ರತಿಭಟನೆ ನಡೆಸಿದ ಮುಖಂಡು ಆರೋಪಿಸಿದರು.

ಪಕ್ಷದ ಮುಖಂಡರು, ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.





## ಅರ್ಧತಲೆನೋವಿಗೆ ಮನೆಮದ್ದು



1. ಒಂದೇ ಭಾಗದಲ್ಲಿ ತಲೆ ನೋಯುತ್ತಿದ್ದರೆ ನುಗ್ಗೆಸೊಪ್ಪನ್ನು ಚೆನ್ನಾಗಿ ತೊಳೆದು ನೀರು ಹಾಕದೆ ಕೇವಲ ಸೊಪ್ಪಿನ ರಸವನ್ನು 2 ಬಾರಿ ಶೋಧಿಸಿ ಬಲಭಾಗದಲ್ಲಿ ನೋವಿದ್ದರೆ ಎಡ ಕಿವಿಗೂ, ಎಡಭಾಗದಲ್ಲಿ ನೋವಿದ್ದರೆ ಬಲ ಕಿವಿಗೂ 2-2 ಹನಿ ಹಾಕಿದರೆ 3 ದಿನಗಳಲ್ಲಿ ನೋವು ಕಡಿಮೆ ಆಗುತ್ತದೆ.
2. ಕೆಂಪು ಮೂಲಂಗಿ ಗಿಡದ ಎಲೆಗೆ ಶುದ್ಧ ತುಪ್ಪ ಸವರಿ ಬಿಸಿಗೆ ಹಿಡಿಯಿರಿ ಅದನ್ನು ಹಿಂಡಿದರೆ ರಸ ಬರುತ್ತದೆ. ಆ ರಸವನ್ನು ಮೂಗಿಗೆ ಅಥವಾ ಕಿವಿಗೆ ಹಿಂಡಿದರೆ ಅರ್ಧತಲೆನೋವು ನಿವಾರಣೆಯಾಗುತ್ತದೆ.
3. ಬಿಳಿ ಶಂಖಪುಷ್ಪದ ಹೂವಿನ ಗಿಡದ ಬೇರನ್ನು ನೀರಲ್ಲಿ ತೇಯ್ದು ಕಣ್ಣಿಗೆ ಕಾಡಿಗೆ ರೀತಿ ಹಚ್ಚಿಕೊಂಡರೆ ಅರೆತಲೆನೋವು ಕಡಿಮೆ ಆಗುತ್ತದೆ.
4. ಬಿಳಿ ಈರುಳ್ಳಿಯನ್ನು 2 ಕರಿಮೆಣಸಿನ ಜೊತೆ ಅರೆದು ರಸ ತೆಗೆಯಿರಿ. ಆ ರಸವನ್ನು 2 ಬಾರಿ ಶೋಧಿಸಿಟ್ಟುಕೊಳ್ಳಿ. ತಲೆನೋವು ಯಾವ ಭಾಗದಲ್ಲಿ ಬರುತ್ತದೆಯೋ ಅದರ ವಿರುದ್ಧ ದಿಕ್ಕಿನ ಮೂಗಿನ ಹೊಳ್ಳೆಗೆ 4 ಹನಿ ಹಾಕಿದರೆ ಅರೆತಲೆನೋವು ನಿವಾರಣೆಯಾಗುತ್ತದೆ.
5. ನುಗ್ಗೆಸೊಪ್ಪಿನ ರಸವನ್ನು ಎಡಭಾಗದಲ್ಲಿ ತಲೆ ನೋವಿದ್ದರೆ ಬಲಭಾಗದ ಕಿವಿಗೆ, ಬಲಭಾಗದಲ್ಲಿ ತಲೆನೋವು ಇದ್ದರೆ ಎಡಕಿವಿಗೆ 2 ಹನಿ ಹಾಕಬೇಕು. ಅರೆತಲೆನೋವು ಕಡಿಮೆ ಆಗುತ್ತದೆ.
6. ಒಣಗಿದ ಎಕ್ಕದ ಬೇರಿನ ಚೂರ್ಣವನ್ನು ಕೆಂಡದ ಮೇಲೆ ಉದುರಿಸಿ ಹೊಗೆಯನ್ನು ತೆಗೆದುಕೊಳ್ಳುವುದರಿಂದ ತಲೆನೋವು ಕಡಿಮೆ ಆಗುತ್ತದೆ.
7. ಮಲಬದ್ಧತೆ ನಿವಾರಣೆ ಮಾಡಿದರೆ ಅನುಕೂಲವಾಗುತ್ತದೆ.
8. ಶುದ್ಧ ತುಪ್ಪವನ್ನು ಬಿಸಿಮಾಡಿ ನೆತ್ತಿಗೆ ಹಾಕಿ ಚೆನ್ನಾಗಿ ತಿಕ್ಕಬೇಕು. 2 ಗಂಟೆಯ ನಂತರ ತಲೆಯನ್ನು ಸ್ವಚ್ಛ ಮಾಡಿಕೊಳ್ಳಬೇಕು. ಅರೆ ತಲೆನೋವು ಉಪಶಮನವಾಗುತ್ತದೆ.
9. ರೋಗ ನಿರೋಧಕಶಕ್ತಿಯನ್ನು ಹೆಚ್ಚಿಸುವ ವಿಟಮಿನ್ ಸಿ ಹೆಚ್ಚಾಗಿ ಇರುವ ಆಹಾರವನ್ನು ಸೇವಿಸಬೇಕು.
10. ತುಂಬೆಸೊಪ್ಪಿನ ರಸವನ್ನು ಎರಡೂ ಮೂಗಿನ ಹೊಳ್ಳೆಗಳಿಗೆ 2-2 ಹನಿಗಳನ್ನು ಹಾಕಿಕೊಳ್ಳುವುದರಿಂದ ಅರೆತಲೆನೋವು ಹತೋಟಿಗೆ ಬರುತ್ತದೆ.

1. ಗೌರಮ್ಮನ ಆರೋಗ್ಯ ಸೂತ್ರಗಳು ಪ್ರಿಸ್ಮ್ ಬುಕ್ಸ್ ಪ್ರೈವೇಟ್ ಲಿಮಿಟೆಡ್ ವತಿಯಿಂದ ಪ್ರಕಟಣೆ
2. ಡಾ. ಗೌರಿ ಸುಬ್ರಮಣ್ಯ ಆಯುರ್ವೇದ ತಜ್ಞರು ಮತ್ತು ಧರ್ಮದರ್ಶಿಗಳು ಮುಕ್ತಿನಾಗ ದೇವಸ್ಥಾನ ಫೋನ್ ನಂ. 9535383921.

## ಬಳ್ಳಾರಿ ಶಾಖೋತ್ಪನ್ನ ಕೇಂದ್ರ ಕುಡುತಿನಿಯಲ್ಲಿ ಬಸವೇಶ್ವರರ ಜಯಂತೋತ್ಸವ



ಬಳ್ಳಾರಿ:-

ಬಳ್ಳಾರಿ ಶಾಖೋತ್ಪನ್ನ ಕೇಂದ್ರ ಕುಡುತಿನಿಯಲ್ಲಿ ವಿಶ್ವ ಗುರು ಜಗಜ್ಯೋತಿ ಬಸವೇಶ್ವರರ 891 ನೇ ಜಯಂತೋತ್ಸವದ ನಿಮಿತ್ತ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಅತಿ-ಯಾಗಿ ಪಾಲ್ಗೊಂಡ ಕನ್ನಡ ಉಪನ್ಯಾಸಕರಾದ ಎ.ಎಂ.ಪಿ ವೀರೇಶಸ್ವಾಮಿಯವರು " ಬಸವಣ್ಣನ ವಚನಗಳಲ್ಲಿ ಜೀವನ ಮೌಲ್ಯಗಳು" ಈ ವಿಷಯ ಕುರಿತು ಮಾತನಾಡುತ್ತಾ ಶರಣ-ರ ವಚನಗಳು ಮಾನವನ ಬದುಕಿನ ಸಂಜೀವಿನಿಯಂತಿವೆ ,ಬಸವಣ್ಣನ ವಚನಗಳಲ್ಲಿ ಬದುಕಿನ ಮೌಲ್ಯಗಳ ಭಂಡಾರವೇ ಅಡಗಿದೆ, ಮೊಗೆದಷ್ಟು ಒಂದೊಂದು ವಚನಗಳು ಮುತ್ತು ರತ್ನಗಳಂತೆ ಗೋಚರಿಸುತ್ತವೆ . ಕಾಯಕ ದಾಸೋಹದ ಪರಿಕಲ್ಪನೆಯನ್ನು ಜಗತ್ತಿಗೆ ನೀಡಿದವರು ಶರಣರು. ಅವರ ವಚನಗಳ ಸಾರವನ್ನು ನಾವು ಬರಿ ಓದಿದರೆ ಸಾಲದು ಅವುಗಳನ್ನು ನಮ್ಮ ನಿತ್ಯದ ಬದುಕಿನಲ್ಲಿ ಅಳವಡಿಸಿ ಕೊಂಡಾಗ ಶರಣರ ವಚನಗಳಿಗೆ ಅರ್ಥ ಬರುತ್ತದೆ ಎಂದರು. ಈ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಬಿ ಟಿ ಪಿ ಎಸ್ ಮುಖ್ಯ ಅಭಿಯಂತರರುಗಳಾದ ಮೋಹನ್ ರಾಜು ಜಿ, ಆಸೋಕ ಕುಮಾರ್ ಹೆಚ್ ಉಪ ಪ್ರಧಾನ ಪ್ರಬಂಧಕರಾದ ಶಿವಲಾಲ್ ಜಿ ನಾಯಕ್, ವೈ ಬಿ ಹಾಲಬಾವಿ ,ಬಸವ ಬಳಗದ ಅಧ್ಯಕ್ಷರಾದ ಕರಿ ಬಸಪ್ಪ ಜಿ ಪಾಲ್ಗೊಂಡಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಈ ಕೇಂದ್ರದ ಕಾರ್ಯ ನಿರ್ವಾಹಕ ನಿರ್ದೇಶಕರಾದ ರಾಜು ಬಿ ಟಿ ವಹಿಸಿಕೊಂಡಿದ್ದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಬಸವ ಬಳಗದ ಅಧ್ಯಕ್ಷರಾದ ಕರಿಬಸಪ್ಪ ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದರು ಕಾರ್ಯಕ್ರಮದ ಕೊನೆಯಲ್ಲಿ ಮುಖ್ಯ ಅತಿಥಿಗಳನ್ನು ಬಸವ ಬಳಗದ ಪದಾಧಿಕಾರಿಗಳು ಸನ್ಮಾನಿಸಿದರು.

## ಒಂದನೇ ಪುಟದಿಂದ

# ದಾಖಲೆ ಮಳೆಗೆ ದೆಹಲಿ ತತ್ತರ ವಿದ್ಯುತ್ ಇಲ್ಲದ ಜನರ ಪರದಾಟ

ರಕ್ಷಣಾ ಸಿಬ್ಬಂದಿ ಹೊರತೆಗೆದಿದ್ದಾರೆ. ಇನ್ನಿಬ್ಬರು ಕಾರ್ಮಿಕರಿಗಾಗಿ ಶೋಧ ಕಾರ್ಯ ನಡೆಯುತ್ತಿದೆ.ಭಾರೀ ಮಳೆಯ ನಂತರ ಚಂದ್ರವಾಲ್ ಡಬ್ಲ್ಯುಡಬ್ಲ್ಯು-2 ಪಂಪ್ ಹೌಸ್‌ನಲ್ಲಿನ ದೋಷದಿಂದಾಗಿ ದೆಹಲಿಯ ಹಲವಾರು ಪ್ರದೇಶಗಳಲ್ಲಿ ನೀರಿನ ಪೂರೈಕೆ ಎರಡು ಪಟ್ಟು ಹೆಚ್ಚಾಗಿದೆ. ನೀರು ಪೂರೈಕೆಯಲ್ಲಿನ ವ್ಯತ್ಯಯ ಮುಂದುವರಿದಿದೆ ಎಂದು ದೆಹಲಿ ಜಲ ಮಂಡಳಿ ತಿಳಿಸಿದೆ.

ದೆಹಲಿ ವಿಮಾನ ನಿಲ್ದಾಣದ ಟರ್ಮಿನಲ್ -1 ಅನ್ನು ಮುಚ್ಚಲಾಗಿದೆ. ಮೇಲ್ಚಾವಣಿ ಕುಸಿದು ಒಬ್ಬ ವ್ಯಕ್ತಿ ಸಾವನ್ನಪ್ಪಿದ ಮತ್ತು ನಾಲ್ವರು ಗಾಯಗೊಂಡ ಒಂದು ದಿನದ ನಂತರ. ಎಲ್ಲಾ ವಿಮಾನಗಳ ಸಂಚಾರವನ್ನು ಟರ್ಮಿನಲ್-2 ಮತ್ತು ಟರ್ಮಿನಲ್-3 ಗೆ ಸ್ಥಳಾಂತರಿಸಲಾಗಿದೆ.

**ಧರೆಗುಳಿದ ಮರ:**

ಭಾರೀ ಮಳೆಯಿಂದಾಗಿ ಹಲವೆಡೆ ಮರಗಳು ಧರೆಗುರುಳಿದ್ದು, ಜನವಸತಿ ಪ್ರದೇಶಗಳಲ್ಲಿ ನಿಲ್ಲಿಸಲಾಗಿದ್ದ ಆಸ್ತಿ ಹಾಗೂ ಕಾರುಗಳಿಗೆ ಹಾನಿಯಾಗಿದೆ. ಅನೇಕ ವಸತಿ ಪ್ರದೇಶಗಳಲ್ಲಿ, ಸ್ಥಳೀಯರು ತಮ್ಮ ಮನೆಗಳನ್ನು ಬಿಡಲು ಸೊಂಟದ ಆಳದ ನೀರಿನ ಮೂಲಕ ಪರದಾಡುವಂತಾಗಿದೆ.

ದೆಹಲಿಯ ಕಿಶನ್‌ಗಂಜ್‌ನಲ್ಲಿ, ಪ್ರವಾಹಕ್ಕೆ ಸಿಲುಕಿದ ಅಂಡರ್ಪಾಸ್ ಅಡಿಯಲ್ಲಿ ಬಸ್‌ನೊಳಗೆ ಸಿಲುಕಿಕೊಂಡಿದ್ದ ಪ್ರಯಾಣಿಕರನ್ನು ಪೊಲೀಸರು ಮತ್ತು ರಕ್ಷಣಾ ತಂಡಗಳು ರಕ್ಷಿಸಿದ್ದಾರೆ. ರಕ್ಷಣಾ ಸಿಬ್ಬಂದಿ, ಲೈಫ್ ಜಾಕೆಟ್‌ಗಳನ್ನು ಧರಿಸಿ, ಪ್ರಯಾಣಿಕರನ್ನು ಹೊರತೆಗೆಯಲು ರಕ್ಷಣಾ ಸಿಬ್ಬಂದಿ ಹರಸಾಹಸ ನಡೆಸಿದ್ದಾರೆ.

**ಮುಂದಿನ 5 ದಿನ ಮಳೆ:**

88 ವರ್ಷಗಳಲ್ಲಿ ಜೂನ್‌ನಲ್ಲಿ ರಾಷ್ಟ್ರ ರಾಜಧಾನಿಯಲ್ಲಿ ಒಂದೇ ದಿನದಲ್ಲಿ ಅತ್ಯಧಿಕ ಮಳೆ ಸುರಿದಿದ್ದ ಇಡೀ ನಗರ ಸ್ತಬ್ದಗೊಂಡಿದೆ. ದೆಹಲಿಯ ಕೆಲವು ಭಾಗಗಳು ಜುಲೈ 1 ರವರೆಗೆ ಭಾರೀ ಮಳೆಯಾಗುವ ಸಾಧ್ಯತೆಯಿದೆ.ಇಡೀ ನಗರ ಜಲಾವೃತವಾಗಿದೆ.ರಾಜಧಾನಿಯಲ್ಲಿ ಮುಂಗಾರು ಮಳೆಯಿಂದ ಮುಂದಿನ ಐದು ದಿನಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ,ದೆಹಲಿಯಲ್ಲಿ 24 ಗಂಟೆಗಳಲ್ಲಿ ದೆಹಲಿಯಲ್ಲಿ 228.1 ಮಿಮೀ ದಾಖಲೆ ಮಳೆಯಾಗಿದೆ.ನಗರದ ಹಲವಾರು ಭಾಗಗಳು ಜಲಾವೃತವಾಗಿದ್ದು, ಹಲವು ಪ್ರದೇಶಗಳು ದೀರ್ಘಾವಧಿಯ ವಿದ್ಯುತ್ ಕಡಿತದಿಂದ ದೆಹಲಿಯ ಅನೇಕ ಭಾಗಗಳಲ್ಲಿ ಜನರು ಕತ್ತಲೆಯಲ್ಲಿ ಕಾಲ ಕಳೆಯುವಂತಾಗಿದೆ.ದೆಹಲಿಯ ದ್ವಾರಕಾ, ಪಾಲಮ್, ವಸಂತ್ ವಿಹಾರ್, ವಸಂತ್ ಕುಂಜ್, ಗುರ್ಗಾಂವ್, ಫರಿದಾಬಾದ್, ಮನೇಸರ್ ಸೇರಿದಂತೆ ದೆಹಲಿ-ಎನ್‌ಸಿಆರ್ನ ಕೆಲವು ಭಾಗಗಳಲ್ಲಿ ಗುಡುಗು ಸಹಿತ ಲಘುವಾಗಿ ಮಧ್ಯಮ ತೀವ್ರತೆಯ ಮಳೆಯ ಮುನ್ಸೂಚನೆ ನೀಡಿದೆ.

# ಬಾಯಿಬಿಟ್ಟರೆ ಜೋಕೆ: ಡಿಕೆಶಿ

ಹೇಳಿದ್ದಾರೆ. ಆದರೆ ಎಲ್ಲವನ್ನು ಪಕ್ಷ ತೀರ್ಮಾನಿಸುತ್ತದೆ ಎಂದರು.

ರಾಜ್ಯದಲ್ಲಿ ಪಕ್ಷದ ಹಿತದೃಷ್ಟಿಯಿಂದ, ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ನಾನು, ಮುಖ್ಯಮಂತ್ರಿ ಸಿದ್ಧರಾಮಯ್ಯ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನಖರ್ಗೆ ಸೇರಿದಂತೆ ವರಿಷ್ಠರು ಕುಳಿತು ಒಂದು ತೀರ್ಮಾನ ಮಾಡಿದ್ದೇವೆ. ಅದರಂತೆ ಸರ್ಕಾರ ರಚನೆ ಮಾಡಿ ಆಡಳಿತ ಮಾಡುತ್ತಿದ್ದೇವೆ. ಅನಗತ್ಯವಾಗಿ ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿ, ಮುಖ್ಯಮಂತ್ರಿ ಬದಲಾವಣೆ ವಿಚಾರ ಈ ಬಗ್ಗೆ ಎಲ್ಲ ಮಾತನಾಡಿ ಪಕ್ಷಕ್ಕೆ ಹಾನಿ ಮಾಡುವುದು ಬೇಡ ಎಂದರು.

ಡಿ.ಕೆ. ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡಬೇಕು ಎಂದು ಚಂದ್ರಶೇಖನಾಥಸ್ವಾಮೀಜಿಗಳಿಂದ ಯಾರೋ ಹೇಳಿದ್ದಾರೆ ಎಂದು ದೆಹಲಿಯ ಕರ್ನಾಟಕ ಭವನದ ಲಿಫ್ಟ್‌ನಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಮತ್ತು ಗೃಹ ಸಚಿವ ಡಾ.ಜಿ.

ಪರಮೇಶ್ವರ್ ಮಾತನಾಡಿರುವ ಆಡಿಯೋ ಧ್ವನಿ ವೈರಲ್ ಆಗಿರುವ ಬಗ್ಗೆ ಕೇಳಲಾದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಈ ಬಗ್ಗೆ ನನಗೇನೂ ಗೊತ್ತಿಲ್ಲ ನಾವಂತೂ ಹೈಕಮಾಂಡ್ ಹೇಳಿದಂತೆ ನಡೆದುಕೊಳ್ಳುತ್ತಿದ್ದೇವೆ. ಸುಮ್ಮನೆ ಅನಗತ್ಯವಾಗಿ ಮುಖ್ಯಮಂತ್ರಿ ಬದಲಾವಣೆ, ಉಪಮುಖ್ಯಮಂತ್ರಿ ಸೃಷ್ಟಿ ಈ ಎಲ್ಲದರ ಬಗ್ಗೆ ಮಾತನಾಡಬಾರದು. ಶಾಸಕರಿರಲಿ, ಸಚಿವರಿರಲಿ ಎಲ್ಲರೂ ಬಾಯಿಗೆ ಬೀಗ ಹಾಕಿಕೊಳ್ಳಬೇಕು ಇಲ್ಲದಿದ್ದರೆ ಎಐಸಿಸಿಯಿಂದ ನೋಟಿಸ್ ಕೊಡಿಸಿ ಶಿಸ್ತು ಕ್ರಮವನ್ನು ಕೈಗೊಳ್ಳುತ್ತೇನೆ ಎಂದು ಶಿವಕುಮಾರ್ ಕಠೋರ ಧ್ವನಿಯಲ್ಲಿ ಹೇಳಿದರು.

ನಾನು ಎಲ್ಲರಿಗೂ ಸ್ವಾಮೀಜಿ ಸೇರಿದಂತೆ ಕೈ ಮುಗಿದು ಮನವಿ ಮಾಡುತ್ತೇನೆ. ಯಾರೂ ನನ್ನ ಬಗ್ಗೆ ಶಿಫಾರಸ್ಸು ಮಾಡುವುದು ಬೇಡ. ರಾಜಕಾರಣವನ್ನು ನಮಗೆ ಬಿಟ್ಟುಬಿಡಿ ಎಂದು ಕೋರುತ್ತೇನೆ. ಅಭಿಮಾನ ಇರಲಿ.

ನನಗೂ ಸ್ವಾಮೀಜಿಗಳ ಬಗ್ಗೆ ಗೌರವ ಇದೆ. ಅವರ ಆಶೀರ್ವಾದ ಇದ್ದರೆ ಜನತೆಗೂ ನಾನು ಏನು ಮಾಡಿದ್ದೇನೆ. ಪಕ್ಷಕ್ಕಾಗಿ ಎಷ್ಟು ದುಡಿದ್ದೇನೆ ಎಲ್ಲವೂ ಗೊತ್ತಿದೆ. ವರಿಷ್ಠರಿಗೂ ಎಲ್ಲವೂ ಮನವರಿಕೆಯಾಗಿದೆ. ಹಾಗಾಗಿ ಈ ಬಗ್ಗೆ ಬಹಿರಂಗವಾಗಿ ಮಾತನಾಡುವುದು ಸಲ್ಲದು ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಒಂದು ವೇಳೆ ಮತ್ತೆ ಶಾಸಕರು, ಸಚಿವರುಗಳು ಈ ಬಗ್ಗೆ ಮಾತನಾಡಿದರೆ ವಿಧಿ ಇಲ್ಲದೆ ಶಿಸ್ತು ಕ್ರಮ ಕೈಗೊಳ್ಳಲೇಬೇಕಾಗುತ್ತದೆ

ಎಂದು ಪುನರುಚ್ಚರಿಸಿದರು. ದೆಹಲಿ ಭೇಟಿ ಉತ್ತಮ ಸ್ಪಂದನೆ ದೆಹಲಿಯಲ್ಲಿ ನಿನ್ನೆ ಮತ್ತು ಮೊನ್ನೆ ನಾನು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಸದರ ಸಭೆ ನಡೆಸಿ ಕೇಂದ್ರ ಸಚಿವರುಗಳನ್ನು ಭೇಟಿ ಮಾಡಿ ರಾಜ್ಯಕ್ಕೆ ಆಗಬೇಕಾಗಿರುವ ಕೆಲಸ, ಅನುದಾನ ಬಿಡುಗಡೆ ಎಲ್ಲದರ ಬಗ್ಗೆಯೂ ಮನವಿ ಮಾಡಿದ್ದೇನೆ. ಕೇಂದ್ರ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಅದರಲ್ಲೂ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸುಮಾರು 2 ಗಂಟೆಗಳ ಕಾಲ ಸಭೆ ನಡೆಸಿ ಕರ್ನಾಟಕಕ್ಕೆ ಆಗಬೇಕಾಗಿರುವ ಕೆಲಸಗಳ ಬಗ್ಗೆ ಆಸಕ್ತಿ ತೋರಿದ್ದಾರೆ. ಅವರಿಗೆ ನಾನು ಕೃತಜ್ಞತೆ ಹೇಳುತ್ತೇನೆ ಎಂದರು.

ಇಂದು ರಾತ್ರಿ ಪ್ರಧಾನಿ ಮೋದಿ ಅವರ ಭೇಟಿ ಇದೆ. ಹಾಗಾಗಿ ನಾನು ಮತ್ತೆ ದೆಹಲಿಗೆ ಹೋಗುತ್ತಿದ್ದೇನೆ. ಮುಖ್ಯಮಂತ್ರಿಗಳ ಜತೆ ಸೇರಿಪ್ರಧಾನಿಗಳನ್ನು ಭೇಟಿ ಮಾಡುತ್ತೇನೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

# ಜುಲೈ 1ರಂದು ಪ್ರತಿಕಾ ದಿನಾಚರಣೆ

ಈ ಸಮಾರಂಭವನ್ನು ಅದ್ದೂರಿಯಾಗಿ ಮಾಡಲು ಸಂಘದ ಎಲ್ಲ ಪದಾಧಿಕಾರಿಗಳು ಮತ್ತು ಸದಸ್ಯರ ನಿರ್ಣಯದ ಮೇರಿಗೆ ಹಮ್ಮಿಕೊಳ್ಳಾಗಿದ್ದು, ತಾಲೂಕಿನ ಎಲ್ಲ ಪತ್ರಕರ್ತರು ಹಾಗೂ ವೈದ್ಯರು ಭಾಗವಹಿಸಬೇಕಂದು ತಿಳಿಸಿದರು.

ಸಂಘದ ಉಪಾಧ್ಯಕ್ಷ ಲಿಂಗಪ್ಪ ಗಾಡವಿ ಮಾತನಾಡಿ, ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ಪಟ್ಟಣದ ಶಿವಬೋಧರಂಗ ಮಠದ ಪೀಠಾಧಿಪತಿಗಳಾದ ದತ್ತಾತ್ರೇಯಬೋಧ ಸ್ವಾಮಿಜಿ, ಶ್ರೀ ಶ್ರೀಧರಬೋಧ ಸ್ವಾಮಿಜಿ ಅವರು ವಹಿಸುವವರು.

ಹಿರಿಯ ವೈದ್ಯ ಡಾ. ಕೆ.ವಿ. ದಂತಿ ಕಾರ್ಯಕ್ರಮವನ್ನು ಉದ್ಘಾಟಿಸುವವರು, ಕ.ಕಾ.ನಿ.ಪ ಸಂಘದ ಗೌರವಾಧ್ಯಕ್ಷ ಸರ್ವೋತ್ತಮ್ ಜಾರಕಿಹೊಳಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಾಗೂ ಮುಖ್ಯ ಅತಿಥಿಗಳಾಗಿ ಕ.ಕಾ.ನಿ.ಪ ಸಂಘದ ರಾಜ್ಯ ಉಪಾಧ್ಯಕ್ಷ ಪುಡಲೀಕ ಬಾಳೋಜಿ, ಜಿಲ್ಲಾಧ್ಯಕ್ಷ ದಿಲೀಪ್ ಕುರಂದವಾಡಿ, ಗೋಕಾಕ ಘಟಕದ ಅಧ್ಯಕ್ಷ ಗುರುರಾಜ ಪೂಜೇರಿ, ಶ್ರೀ ಶಿವಬೋಧರಂಗ ಅರ್ಬನ್ ಸೊಸಾಯಿಟಯ ಅಧ್ಯಕ್ಷ ಬಸವರಾಜ ಗುಲಗಾಜಂಬಗಿ, ಮೂಡಲಗಿ ತಹಶೀಲ್ದಾರ ಮಹಾದೇವ ಸನ್ನಮುರಿ, ತಾಲೂಕಾ ವೈದ್ಯರ ಸಂಘದ ಅಧ್ಯಕ್ಷ ಪ್ರಕಾಶ ಬುದ್ನಿ, ಶ್ರೀನಿವಾಸ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ರಂಗಣ್ಣ ಸೋನವಾಲ್ಕರ, ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಪ್ರಾಚಾರ್ಯರ ಸಂಗಮೇಶ ಗುಜಗೊಂಡ ಸೇರಿದಂತೆ ಮೂಡಲಗಿ ತಾಲೂಕಾ ಮಟ್ಟದ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವವರು ಎಂದರು.

ಈ ಸದಂರ್ಭದಲ್ಲಿ ಕ.ಕಾ.ನಿ.ಪ ಸಂಘ ಮೂಡಲಗಿ ತಾಲೂಕಾ ಘಟಕದ ಪ್ರಧಾನ ಕಾರ್ಯದರ್ಶಿ ಮಲ್ಲು ಬೋಳನವರ, ಕಾರ್ಯದರ್ಶಿ ಅಲ್ತಾಫ್ ಹವಾಲ್ದಾರ, ಖಜಾಂಚಿ ಮಹಾದೇವ ನಡುವಿನಕೇರಿ, ಸದಸ್ಯರಾದ ಚಂದ್ರಶೇಖರ ಪತ್ತಾರ, ಈಶ್ವರ ಢವಳೇಶ್ವರ ಇದ್ದರು.

# ಪುಸ್ತಕ ಬಹುಮಾನಕ್ಕಾಗಿ ಕೃತಿಗಳ ಆಹ್ವಾನ

ಬೆಂಗಳೂರು:-

ಕರ್ನಾಟಕ ಜಾನಪದ ಅಕಾಡೆಮಿಯು 2022 ಮತ್ತು 2023ನೇಸಾಲಿನ ಎರಡು ವರ್ಷಗಳ ಪುಸ್ತಕ ಬಹುಮಾನ ಯೋಜನೆಯಡಿಯಲ್ಲಿ ಪ್ರಥಮ ಅವೃತ್ತಿಯಲ್ಲಿ ಮುದ್ರಣಗೊಂಡಿರುವ (ತಾಂತ್ರಿಕ ಹಾಗೂ ಪೂರ್ವಭಾವಿ ಪುಟಗಳನ್ನು ಹೊರತು ಪಡಿಸಿ) ಕನಿಷ್ಟ 150 ಪುಟುಗಳಿಗೂ ಮೇಲ್ಪಟ್ಟಿರುವ ಜಾನಪದ ಗದ್ಯ, ಜನಪದ ಪದ್ಯ, ಜನಪದ ವಿಚಾರ-ವಿಮರ್ಶೆ, ಸಂಶೋಧನೆ ಮತ್ತು ಜನಪದ ಸಂಕೀರ್ಣ ಸಂಬಂಧಸಿದ ಕೃತಿಗಳಿಗೆ ಪುಸ್ತಕ ಬಹುಮಾನಕ್ಕಾಗಿ ಲೇಖಕರು, ಸಂಪಾದಕರು ಮತ್ತು ಪ್ರಕಾಶಕರುಗಳಿಂದ ಕೃತಿಗಳ ಆಹ್ವಾನ ಆಸಕ್ತ ಲೇಖಕರು, ಸಂಪಾದಕರು ಮತ್ತು ಪ್ರಕಾಶಕರು ನಾಲ್ಕು ಕೃತಿಗಳನ್ನು ದ್ವಿಪ್ರತಿ ಬಿಲ್ಲಿನೊಂದಿಗೆ ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, 2ನೇ ಮಹಡಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-560 002 ಇಲ್ಲಿಗೆ ಜುಲೈ 20 ರೊಳಗೆ ಖುದ್ದಾಗಿ , ಕೊ-ರಿಯರ್ ಅಥವಾ ಅಂಚೆ ಮೂಲಕ ಕಳುಹಿಸಿ ಕೊಡಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ : 080-22215509 ಗೆ ಸಂಪರ್ಕಿಸಬಹುದು ಎಂದು ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟಾರ್ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆ. 21 ಯುಜಿಸಿ-ನೆಟ್ ಪರೀಕ್ಷೆ

ನಡೆಸುವ ಸರ್ಕಾರದ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ.ಎನ್‌ಟಿಎ ರಚನೆಯನ್ನು ಸುಧಾರಿಸಲು ಮತ್ತು ಪಾರದರ್ಶಕತೆ ಹೆಚ್ಚಿಸಲು ಉನ್ನತ ಮಟ್ಟದ ಸಮಿತಿ ರಚಿಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.ಯುಜಿಸಿ-ನೆಟ್ ರದ್ದತಿಯ ಹಿಂದಿನ ಕಾರಣವನ್ನು ಧರ್ಮೇಂದ್ರ ಪ್ರಧಾನ್ ಬಹಿರಂಗಪಡಿಸಿದ್ದು, ಡಾರ್ಕ್‌ನೆಟ್‌ನಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವುದು ಕಂಡುಬಂದ ನಂತರ ಪರೀಕ್ಷೆಯನ್ನು ರದ್ದುಗೊಳಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದಾರೆ."ಡಾರ್ಕ್‌ನೆಟ್‌ನಲ್ಲಿನ ಯುಜಿಸಿ-ನೆಟ್ ಪ್ರಶ್ನೆ ಪತ್ರಿಕೆಯು ಯುಜಿಸಿ-ನೆಟ್‌ನ ಮೂಲ ಪ್ರಶ್ನೆ ಪತ್ರಿಕೆಗೆ ಹೊಂದಿಕೆಯಾಗುತ್ತಿದೆ ಎಂದು ಸ್ಪಷ್ಟವಾದ ನಂತರ, ಪರೀಕ್ಷೆ ರದ್ದುಗೊಳಿಸಲು ನಿರ್ಧರಿಸಿದ್ದೆವು.ಈಗ ಪರೀಕ್ಷಾ ದಿನ ನಿಗದಿ ಮಾಡಿದ್ದೇವೆ ಎಂದು ಹೇಳಿದ್ದಾರೆ.ಕೌನ್ಸಿಲ್ ಫಾರ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರಿಸರ್ಚ್- ಸಿಎಸ್ ಐಆರ್- ಯುಜಿಸಿ-ನೆಟ್ ಪರೀಕ್ಷೆಗಳ ನಿರ್ವಹಣೆಯಲ್ಲಿನ ಅಕ್ರಮಗಳ ಆರೋಪದ ನಡುವೆ ಪೂರ್ವಭಾವಿ ಕ್ರಮವಾಗಿ ಮುಂದೂಡಲಾಗಿತ್ತು. ಜುಲೈ 25 ರಿಂದ ಜುಲೈ 27 ರವರೆಗೆ ನಡೆಯಲಿದೆ.ರಾಸಾಯನಿಕ ವಿಜ್ಞಾನ, ಭೂಮಿ, ವಾಯುಮಂಡಲ, ಸಾಗರ ಮತ್ತು ಗ್ರಹ ವಿಜ್ಞಾನ, ಜೀವ ವಿಜ್ಞಾನ, ಗಣಿತ ವಿಜ್ಞಾನ ಮತ್ತು ಭೌತಿಕ ವಿಜ್ಞಾನಗಳಲ್ಲಿ ಪಿಎಚ್‌ಡಿ ಪ್ರವೇಶಕ್ಕಾಗಿ ಸಿಎಸ್ ಐಆರ್- ಯುಜಿಸಿ-ನೆಟ್ ಅನ್ನು ಸ್ವೀಕರಿಸಲಾಗಿದೆ.ನಾಲ್ಕು ವರ್ಷಗಳ ಇಂಟಿಗ್ರೇಟೆಡ್ ಟೀಚರ್ ಎಜುಕೇಶನ್ ಪ್ರೋಗ್ರಾಂಗೆ ಪ್ರವೇಶಕ್ಕಾಗಿ ರಾಷ್ಟ್ರೀಯ ಸಾಮಾನ್ಯ ಪ್ರವೇಶ ಪರೀಕ್ಷೆ ಜೂನ್ 12 ರಂದು ಅದರ ನಿಗದಿತ ಪ್ರಾರಂಭಕ್ಕೆ ಗಂಟೆಗಳ ಮೊದಲು ಮುಂದೂಡಲ್ಪಟ್ಟಿದೆ, ಈಗ ಜುಲೈ 10 ರಂದು ನಡೆಸಲಾಗುವುದು ಎಂದು ತಿಳಿಸಲಾಗಿದೆ.

## ದಿಢೀರ್ ಪ್ರವಾಹ ಟ್ಯಾಂಕರ್ ಅಪಘಾತ ಐವರು ಯೋಧರ ಸಾವು

ಮಾಹಿತಿ ನೀಡಿದ್ದಾರೆ.ನಿನ್ನೆ ಸಂಜೆ ನದಿ ದಾಟುವ ಟ್ಯಾಂಕ್ ವ್ಯಾಯಾಮದ ವೇಳೆ ಅಲ್ಲಿ ನೀರಿನ ಮಟ್ಟದಲ್ಲಿ ಹಠಾತ್ ನೀರಿನ ಪ್ರಮಾಣ ಹೆಚ್ಚಳದಿಂದಾಗಿ ದುರ್ಘಟನೆ ಸಂಭವಿಸಿದೆ ಎಂದು ತಿಳಿಸಲಾಗಿದೆ.ಹೆಚ್ಚಿನ ಸೇನಾ ಸಿಬ್ಬಂದಿ ಪ್ರಾಣ ಕಳೆದುಕೊಳ್ಳುವ ಭೀತಿ ಎದುರಾಗಿದೆ. ಈ ಬಗ್ಗೆ ಅಗತ್ಯ ರಕ್ಷಣಾ ವ್ಯವಸ್ಥೆ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ವಿವರ ನೀಡಿದ್ದಾರೆ. ಗಡಿ ಪ್ರದೇಶದಲ್ಲಿ ಬಿಗಿ ಭದ್ರತೆಗೆ ನಿಯೋಜಿಸಲಾಗಿರುವ ಸೇನಾ ಸಿಬ್ಬಂದಿ ವಿವಿಧ ತಾಲೀಮು ಅಭ್ಯಾಸದ ವೇಳೆ ಈ ಅವಘಡ ನಡೆದಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಜಾಗೃತೆ ವಹಿಸಲಾಗುವುದು ಎಂದಿದ್ದಾರೆ.

ತೀವ್ರ ಕಂಬನಿ

ಐವರು ಸೈನಿಕರು ಪ್ರಾಣಕಳೆದುಕೊಂಡ ಘಟನೆ ಸಂಬಂದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ತೀವ್ರ ಕಂಬನಿ ಮಿಡಿದಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು "ಲಡಾಖ್‌ನಲ್ಲಿ ನದಿಯೊಂದಕ್ಕೆ ಟ್ಯಾಂಕ್‌ಗೆ ಅಡ್ಡಲಾಗಿ ಸಂಭವಿಸಿದ ದುರದೃಷ್ಟಕರ ಅಪಘಾತದಲ್ಲಿ ನಮ್ಮ ಐವರು ವೀರ ಭಾರತೀಯ ಸೇನೆಯ ಯೋಧರು ಪ್ರಾಣ ಕಳೆದುಕೊಂಡಿರು ವುದಕ್ಕೆ ತೀವ್ರ ದುಃಖವಾಗಿದೆ ಎಂದಿದ್ದಾರೆ.

ದುಃಖತಪ್ತ ಕುಟುಂಬಗಳಿಗೆ ನನ್ನ ಹೃತ್ಪೂರ್ವಕ ಸಂತಾಪಗಳು, ದೇಶ ಅವರೊಂದಿಗೆ ದೃಢವಾಗಿ ನಿಂತಿದೆ. ಈ ದುಃಖದ ಸಮಯದಲ್ಲಿ ಅವರ ಕುಟುಂಬದ ಜೊತೆ ನಿಲ್ಲುವುದಾಗಿ ಅವರು ತಿಳಿಸಿದ್ದಾರೆ.

# ಆಂಬುಲೆನ್ಸ್ ಬೈಕ್ ಡಿಕ್ಕಿ: ಮೂವರ ಸಾವು

ಅಜಯ್ (25) ಮೃತಪಟ್ಟವರು.

ವೇಗವಾಗಿ ಚಲಿಸುತ್ತಿದ್ದ ಬೈಕ್, ಸವಾರನ ನಿಯಂತ್ರಣ ತಪ್ಪಿ ಆಂಬುಲೆನ್ಸ್‌ಗೆ ಡಿಕ್ಕಿ ಹೊಡೆದು ಈ ದುರ್ಘಟನೆ ಸಂಭವಿಸಿದ್ದು, ಬೈಕ್ ನಲ್ಲಿದ್ದ ಮೂವರು ಸಾವನ್ನಪ್ಪಿದ್ದಾರೆ.

ಶಿವಮೊಗ್ಗದಿಂದ ಹಾವೇರಿ ಕಡೆ ಆಂಬುಲೆನ್ಸ್ ಮಧ್ಯರಾತ್ರಿ ತೆರಳುತ್ತಿದ್ದ ವೇಳೆ ಶಿಕಾರಿಪುರ ಕಡೆಯಿಂದ ಜೋಗದ ಕಡೆ ತೆರಳುತ್ತಿದ್ದ ಬೈಕ್, ತರಲಘಟ್ಟ ಗ್ರಾಮದ ಬಳಿ ಆಂಬುಲೆನ್ಸ್‌ಗೆ ಡಿಕ್ಕಿಯಾಗಿದೆ.ಸ್ಥಳಕ್ಕೆ ಶಿಕಾರಿಪುರ ಗ್ರಾಮಾಂತರ ಠಾಣೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಶಿಕಾರಿಪುರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉದ್ಯಮಿ ಪುತ್ರನ ಸಾವು:

ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲೂಕಿನ ಉಜಿರೆಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಉಜಿರೆ ಉದ್ಯಮಿ ಎಂ.ಆರ್.ನಾಯಕ್ ಅವರ ಪುತ್ರ ಪ್ರಜ್ವಲ್ ಮೃತಪಟ್ಟಿದ್ದಾರೆ.ಉಜಿರೆ ಬಳಿಕ ಕಾರು ವೇಗವಾಗಿ ಚಲಿಸುತ್ತಿದ್ದ ವೇಳೆ ನಿಯಂತ್ರಣ ತಪ್ಪಿದ್ದು, ಡಿವೈಡರ್ ಮೇಲೇರಿ ವಿದ್ಯುತ್ ಕಂಬಕ್ಕೆ ಡಿಕ್ಕಿಯಾಗಿದೆ.

ಇಂದು ಬೆಳಗ್ಗೆ ಅಪಘಾತ ಸಂಭವಿಸಿದ್ದು, ತೀವ್ರತೆಗೆ ಕಾರು ನಜ್ಜುಗುಜ್ಜಾಗಿದೆ. ಬೆಳ್ತಂಗಡಿ ಸಂಚಾರ ಪೊಲೀಸರು ಪ್ರಕರಣ ದಾಖಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿದ್ದಾರೆ.

## ಚಾಂಪಿಯನ್ ಪಟ್ಟಕ್ಕೆ ಭಾರತ-ದ.ಆಫ್ರಿಕಾ ಕಾದಾಟ

ನೆಚ್ಚಿನ ತಂಡ ಆದರೆ ಟಿ20 ಆವೃತ್ತಿಯಲ್ಲಿ ಫಲಿತಾಂಶ ಹೇಳುವುದು ಸ್ವಲ್ಪ ಕಷ್ಟ. ಯಾ-ಕಂದರೆ ಎರಡೂ ತಂಡಗಳು ವಿಶ್ವ ಕ್ರಿಕೆಟ್‌ನ ಬಲಿಷ್ಠ ತಂಡಗಳಾಗಿವೆ.ವಿಶೇಷವೆಂದರೆ ಐಸಿಸಿ ಟೂರ್ನಿಯ ಫೈನಲ್‌ನಲ್ಲಿ ಇದೇ ಮೊದಲ ಬಾರಿಗೆ ಭಾರತ ಮತ್ತು ದಕ್ಷಿಣ ಆಫ್ರಿಕಾ ತಂಡಗಳು ಮುಖಾಮುಖಿಯಾಗುತ್ತಿವೆ. ಕಳೆದ 10 ವರ್ಷಗಳಲ್ಲಿ ಟೀಮ್ ಇಂಡಿಯಾ 5 ಫೈನಲ್‌ಗಳನ್ನು ಆಡಿದೆ. 2013ರಲ್ಲಿ ಚಾಂಪಿಯನ್ಸ್ ಟ್ರೋಫಿ ಗೆದ್ದಿತ್ತು. 2014ರ ಟಿ20 ವಿಶ್ವಕಪ್‌ನಲ್ಲಿ ಭಾರತ ರನ್ನರ್‌ಅಪ್ ಆಗಿತ್ತು. 2017ರ ಚಾಂಪಿಯನ್ಸ್ ಟ್ರೋಫಿಯಲ್ಲಿ ರನ್ನರ್‌ಅಪ್, 2021 ಮತ್ತು 2023ರ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನಲ್ಲಿ ಫೈನಲ್ ಕಾದಾಟ.2023ರ ಏಕದಿನ ವಿಶ್ವಕಪ್‌ನಲ್ಲಿ ಫೈನಲ್ ಆಡಿತ್ತು. ಪ್ರಶಸ್ತಿ ಬರ ಎದುರಿಸುತ್ತಿರುವ ಭಾರತ ಈ ಬಾರಿ ಕನಸು ನನಸು ಮಾಡಲು ಅವಕಾಶವಿದೆ. ರಾಹುಲ್ ದ್ರಾವಿಡ್ ಅವರಿಗೆ ಕೋಚ್ ಆಗಿ ಕೊನೆಯ ಪಂದ್ಯ ಇದಾಗಿದೆ.ಈ ವಿಶ್ವಕಪ್ ನಮಗೆ ಬೇಕು ಎಂದು ಹೇಳಿರುವ ರಾಹುಲ್ ದ್ರಾವಿಡ್‌ಗೆ ಟ್ರೋಫಿ ಗೆದ್ದು ಗೆಲುವಿನ ಉಡುಗೊರೆ ನೀಡಬೇಕಿದೆ. ವಿರಾಟ್ ಕೊಹ್ಲಿ, ನಾಯಕ ರೋಹಿತ್ ಶರ್ಮಾ, ಜಸ್ಪ್ರೀತ್ ಬುಮ್ರಾ ಅವರಿಗೆ ಇದು ಕೊನೆಯ ಟಿ20 ವಿಶ್ವಕಪ್ ಆಗಿದೆ.ಇತ್ತ ದಕ್ಷಿಣ ಆಫ್ರಿಕಾ ಕೂಡ ಇದೇ ಮೊದಲ ಬಾರಿಗೆ ಫೈನಲ್ ತಲುಪಿದೆ. ಮೊದಲ ಪ್ರಯತ್ನದಲ್ಲೆ ಟ್ರೋಫಿ ಗೆದ್ದು ಪ್ರಶಸ್ತಿ ಬರವನ್ನು ನೀಗಿಸುವ ತವಕದಲ್ಲಿದೆ. ಇಂದು ಪಂದ್ಯ ಗೆದ್ದು ಹೊಸ ಚರಿತ್ರೆ ಸೃಷ್ಟಿಸಲು ಕಠಿಣ ಅಭ್ಯಾಸ ಮಾಡಿ ಕಣಕ್ಕಿಳಿಯುತ್ತಿದೆ.ಸೌತ್ ಆಫ್ರಿಕಾ ತಂಡದ ನಾಯಕ ಏಡಿನ್ ಮಾರ್ಕ್‌ರಮ್ ಅದೃಷ್ಟದ ನಾಯಕ ಎಂದೇ ಕರೆಸಿಕೊಂಡಿದ್ದಾರೆ. ಯಾಕಂದರೆ 1992,1999, 2007, 2015, 2023ರ ಏಕದಿನ ವಿಶ್ವಕಪ್, 2009ರ ಟಿ20, 2014ರ ಟಿ20ವಿಶ್ವಕಪ್‌ಗಳಲ್ಲಿ ದ.ಆಫ್ರಿಕಾ ಸೋತಿತ್ತು. ಆದರೆ ಈ ಟಿ20 ವಿಶ್ವಕಪ್‌ನಲ್ಲಿ ಮಾರ್ಕ್‌ರಮ್ ನಾಯಕತ್ವದಲ್ಲಿ ದ.ಆಫ್ರಿಕಾ ಚೋಕರ್ಸ್ ಹಣೆಪಟ್ಟಿ ಕಳಚಿ ಫೈನಲ್ ತಲುಪಿದೆ.

19ರ ವಯಸ್ಸಿನಲ್ಲಿ ಮಾರ್ಕ್‌ರಮ್ ದ.ಆಫ್ರಿಕಾಕ್ಕೆ ಕಿರಿಯರ ವಿಶ್ವಕಪ್ ಗೆಲ್ಲಿಸಿಕೊಟ್ಟಿದ್ದರು. 2023ರ ಚೊಚ್ಚಲ ಸೌತ್ ಆಫ್ರಿಕಾ ಟಿ20 ಲೀಗ್‌ನಲ್ಲೂ ಸನ್‌ರೈಸಸ್ ಈಸ್ಟರ್ನ್ ಕೇಪ್ ತಂಡವನ್ನ ಚಾಂಪಿಯನ್ ಪಟ್ಟಕ್ಕೇರಿಸಿದ್ದರು. ಈ ಹಿನ್ನೆಲೆಯಲ್ಲಿ ನಾಯಕ ಮಾರ್ಕ್‌ರಮ್ ಸೋಲನ್ನರಿಯದ ನಾಯಕನಾಗಿ ಗುರುತಿಸಿಕೊಂಡಿದ್ದರು. ಮಾರ್ಕ್‌ರಮ್ ಮತ್ತೊಮ್ಮೆ ಅದೃಷ್ಟದ ಪರೀಕ್ಷೆಗೆ ಒಳಪಡಲಿದ್ದಾರೆ. ಯಾವ ತಂಡ ಗೆದ್ದರೂ ಇತಿಹಾಸವಾಗಲಿದೆ.ಒಟ್ಟಾರೆ ಕೆರೆಬಿಯನ್ ನಾಡಿನಲ್ಲಿ ಈ ಫೈನಲ್ ಹಣಾಹಣಿ ಕುತೂಹಲ ಕೆರಳಿಸಿದೆ.

## ಬೆಳಕಿನ ಚಂದ್ರ ಗುರು ಪುಟ್ಟರಾಜರು..



ಬೆಳಕೂ ಚೆಲ್ಲಿದ ಮಹಾ ಬೆಳಕು
ಗದುಗಿನ ಗವಾಯಿಶ್ವರರು
ಅಂಧಕರಾಗಿ ಜಾಗವೇ ಬೆಳೆಸಿದವರು
ಈ ಸೃಷ್ಟಿಯ ಮಹಾಚೇತನವಾದ ಗುರು ಪುಟ್ಟರಾಜರು..
ಮಹಾ ಪುಣ್ಯ ಪುರುಷರಲ್ಲಿ ಒಬ್ಬರು
ಗದಗು ಗದ್ದಿಗೆಯನ್ನು
ಮಾಡಿದ ಮಹಾ ಪುರುಷರು
ಗುರು ಪುಟ್ಟರಾಜರು
ಸಾಕ್ಷಾತ್ ಪರಮೇಶ್ವರರು
ಸಂಗೀತ ಸುಧೆಯನ್ನು ಹಾರಿಸಿದರು
ಗುರು ಪುಟ್ಟರಾಜರು..
ವಿರೇಶ್ವರ ಪುಣ್ಯಾಶ್ರಮದಲ್ಲಿ
ಅಂತಹ ಪುಣ್ಯಾಶ್ರಮದ ಪುಣ್ಯ
ಭೂಮಿಯ ಮೇಲೆ ಕಾಲಿಟ್ಟರೆ ಸಂಗೀತ ಸ್ವರಗಳು ಕೇಳಿ ಬರುತ್ತೇ ಉಭಯ ಗುರುಗಳು ನಾಧಸ್ವರಗಳು...
ಗದುಗಿನ ಸಂಗೀತ ಗಂಗೆ
ಗುರು ಪುಟ್ಟರಾಜರ ಸಾಹಿತ್ಯ ಸಿರಿ
ಈ ಪುಣ್ಯಭೂಮಿ ನೆಲದಲ್ಲಿ ಎಲ್ಲಿ
ಕಲಾವಿದರನ್ನು ಅರಸಿ ಬಂದಿವೆ
ಪುಣ್ಯಾಶ್ರಮದಲ್ಲಿ ಪುಣ್ಯದ ಪ್ರಸಾದ
ಎಲ್ಲರನ್ನು ಕೈ ಬಿಸಿ ಕರೆಯುತ್ತಿದೆ
ಈ ಪುಣ್ಯದ ನೆಲದಲ್ಲಿ
ನಾವುಇದ್ದೇವೆ ಇದು
ಉಭಯ ಗುರುಗಳ ಕೃಪಾ ಆರ್ಶೀವಾದ...

**-ಡಾ ವ್ಹಿ.ವ್ಹಿ. ಅಶ್ವಿನಿ, ಹಿರೇಮಠ**
ಅಧ್ಯಕ್ಷರು ಅಶ್ವಿನಿ ಪ್ರಕಾಶನ ಗದಗ

## ಮಗುವಿನ ಪಾಲಕರ ಪತ್ತೆಗಾಗಿ ಮನವಿ

ಬೆಂಗಳೂರು:-

ಬೆಂಗಳೂರು ನಗರ ರೈಲ್ವೆ ನಿಲ್ದಾಣದಲ್ಲಿ ನಿಂತಿದ್ದ ರೈಲುಗಾಡಿ ಸಂಖ್ಯೆ:16594 ಕೆ.ಎಸ್.ಆರ್ ಬೆಂಗಳೂರು ಎಕ್ಸ್ ಪ್ರೆಸ್ ನ ಜನರಲ್ ಬೋಗಿ ನಂ.182119 ನಲ್ಲಿ ದಿನಾಂಕ: 13-06-2024 ರಂದು 2 ದಿನದ ಹೆಣ್ಣು ಮಗು ಪತ್ತೆಯಾಗಿದ್ದು, ಈ ಬಗ್ಗೆ ನಗರ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಕ್ಕಳ ಕಲ್ಯಾಣ ಸಮಿತಿ -03 ಬೆಂಗಳೂರು ರವರ ಆದೇಶದಂತೆ ಮಗುವನ್ನು ಸರ್ಕಾರದ ವಶಕ್ಕೆ ಪಡೆದು-ಕೊಂಡು ಮಗುವಿನ ಚಿಕಿತ್ಸೆ ಕುರಿತು ವಾಣಿವಿಲಾಸ ಆಸ್ಪತ್ರೆಗೆ ದಾಖಲಿಸಿದ್ದು, 2 ದಿನದ ಹೆಣ್ಣು ಮಗುವಿನ ವಾರಸುದಾರರು ಇದ್ದಲ್ಲಿ ಬೆಂಗಳೂರು ನಗರ ರೈಲ್ವೆ ಪೊಲೀಸ್ ಠಾಣೆಯನ್ನು ಸಂಪರ್ಕಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ನಗರ ರೈಲ್ವೆ ಪೊಲೀಸ್ ಠಾಣೆ, ಬೆಂಗಳೂರು ಅಥವಾ ದೂರವಾಣಿ ಸಂಖ್ಯೆ: 080-22456370, 9480802113, 9480802140, ಅಥವಾ ಇ-ಮೇಲ್: blorecityrly@ksp.gov.in ಗೆ ಸಂಪರ್ಕಿಸಬಹುದಾಗಿದೆ ಎಂದು ನಗರ ರೈಲ್ವೆ ಪೊಲೀಸ್ ಠಾಣೆಯ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿದ್ಯಾರ್ಥಿನಿಲಯಗಳಿಗೆ ಆನ್ ಲೈನ್ ಮೂಲಕ ಅರ್ಜಿ ಆಹ್ವಾನ

ಬೆಂಗಳೂರು:-

ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2024-25 ನೇ ಸಾಲಿಗೆ ಬೆಂಗಳೂರು ಉತ್ತರ ತಾಲ್ಲೂಕು ವ್ಯಾಪ್ತಿಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳಿಗಾಗಿ ಹಾಸ್ಟೆಲ್ ಮ್ಯಾನೇಜ್ ಮೆಂಟ್ ಇನ್ಫಾರ್ಮೇಷನ್ ಸಿಸ್ಟಂ ನಲ್ಲಿ ಆನ್ ಲೈನ್ ಮೂಲಕ ಜುಲೈ 15 ರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಸಕ್ತರ ವಿದ್ಯಾರ್ಥಿಗಳು ತಮ್ಮ ಮೂಲ ದಾಖಲಾತಿಗಳೊಂದಿಗೆ ವಿದ್ಯಾರ್ಥಿನಿಲಯಗಳಲ್ಲಿ ಸ್ಥಳಾವಕಾಶವನ್ನು ಖಚಿತಪಡಿಸಿಕೊಂಡು ಸಹಾಯಕ ನಿರ್ದೇಶಕರು, ಬೆಂಗಳೂರು ಉತ್ತರ ತಾಲ್ಲೂಕು ರವರ ಅನುಮೋದನೆ ಪಡೆದು ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಪಡೆಯಬಹುದು ಹಾಗೂ ಕಡ್ಡಾಯವಾಗಿ ಎಚ್.ಎಂ.ಐ.ಎಸ್ ನಲ್ಲಿ ನೋಂದಾಣಿ ಮಾಡಿಸಿಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಗ್ರೇಡ್-1 ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಅಥವಾ ವೆಬ್ ಸೈಟ್ https://swdservices.karnataka.gov.in/swdhmis, ದೂರವಾಣಿ ಸಂಖ್ಯೆ: 080-28461351, 080-28461356 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಬೆಂಗಳೂರು ಉತ್ತರ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿಎಂ.ರಾಜೀನಾಮೆಗೆ ಆಗ್ರಹಿಸಿ ಹೊಸಪೇಟೆ ಡಿಸಿ ಕಛೇರಿಗೆ ಬಿಜೆಪಿ ಮುತ್ತಿಗೆ ಯತ್ನ



ಹೊಸಪೇಟೆ:–

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ 187ಕೋಟಿ ಅವ್ಯವಹಾರದ ಜೊತೆ ಕೇಂದ್ರ ಪುರಸ್ಕೃತ ಯೋಜನೆಯ ಅನುದಾನ 83ಕೋಟಿ ಅವ್ಯವಹಾರಕ್ಕೆ ಸಂಬಂದಿಸಿದಂತೆ ಮುಖ್ಯಮಂತ್ರಿಗಳು ರಾಜಿನಾಮೆ ನೀಡುವಂತೆ ಒತ್ತಾಯಿಸಿ ಬಿಜೆಪಿ ಕಾರ್ಯಕರ್ತರು ಇಂದು ಜಿಲ್ಲಾಧಿಕಾರಿಗಳ ಕಛೇರಿ ಮುತ್ತಿಗೆಗೆ ಯತ್ನಿಸಿದರು.

ಹೊಸಪೇಟೆಯ ಸಾಯಿ ಬಾಬಾ ವೃತ್ತದಿಂದ ಆರಂಭವಾದ ಮೆರವಣಿಗೆ ಜಿಲ್ಲಾಧಿಕಾರಿಗಳ ಕಛೇರಿದೆ ಬಂದ ನಂತರ ನಡೆದ ಪ್ರತಿಭಟನಾ ಸಭೆಯಲ್ಲಿ ಜಿಲ್ಲಾ ಬಿಜೆಪಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಹಡಗಲಿ ಶಾಸಕ ಕೃಷ್ಣನಾಯ್ಕ್, ರಾಜ್ಯದ ಎಲ್ಲಾ ಅಭಿವೃದ್ಧಿ ಅನುದಾನ ನಿಗಮ ಮಂಡಳಿಯ ಅನುದಾನ ಸಚಿವರ, ಅಧಿಕಾರಿಗಳ ಖಾತೆಗೆ ಹಾಗೂ ವ್ಯಯುಕ್ತಿಕ ಖಾತೆಗೆ ಜಮಾ ಆಗುತ್ತದೆ, ಕೂಡಲೆ ಮುಖ್ಯಮಂತ್ರಿ ಗಳು ತನಿಖೆಗೆ ಒಳಪಡಿಸಬೇಕು ಇಲ್ಲವಾದರೆ ಮುಂದಿನ ದಿನಗಳಲ್ಲಿ ಉಗ್ರಹೋರಾಟ ಮಾಡುವುದಾಗಿ ತಿಳಿಸಿದರು.

ಪಕ್ಷ ಜಿಲ್ಲಾಧ್ಯಕ್ಷ ಚೆನ್ನಬಸವನಗೌಡ, ಜಂಬಯ್ಯನಾಯಕ, ರಾಜ್ಯ ಯುವ ಮೋರ್ಚಾ ನಾಯಕ ಸಿಧಾರ್ಥಸಿಂಗ್ ಮುಖಂಡರು ಮಾತನಾಡಿ ಅಧಿಕಾರಿಯ ಆತ್ಮಹತ್ಯೆ ಈ ಎಲ್ಲಾ ಹಂತದ ಅವ್ಯವಹಾರ ಬಯಲಾಗುವಂತೆ ಮಾಡಿದೆ, ಈ ಹಣದ ರೂವಾರಿ ಯಾರು?, ಅಧಿಕಾರಿಯ ಆತ್ಮಹತ್ಯೆಗೆ ಹೊಣೆ ಯಾರು? ಆರ್ಥಿಕವಾಗಿ ದುರ್ಬಲರಾಗಿರುವ ಎಸ್.ಟಿ.ಸಮುದಾಯಕ್ಕೆ ನ್ಯಾಯ ಒದಗಿಸುವವರು ಯಾರು ಎಂದು ಪ್ರಶ್ನಿಸಿದ ಅವರು ಇದರ ಜೊತೆ ಕೇಂದ್ರ ಪುರಸ್ಕೃತ ಯೋಜನೆಗಳ ಅನುದಾನ 83 ಕೋಟಿ ಸಹ ದುರ್ಬಳಿಕೆಯಾಗಿದೆ ಎಲ್ಲವೂ ಸಹ ಮಾರ್ಚ್ ಕೊನೆಯವಾರದಲ್ಲಿಯೇ ನಡೆದಿರುವುದು ವಿಶೇಷವಾಗಿದೆ ಇಷ್ಟೊಂದು ದೊಡ್ಡ ಮಟ್ಟದ ಆರ್ಥಿಕ ಅವ್ಯವಹಾರ ಮುಖ್ಯಮಂತ್ರಿಗಳ ಗಮನಕ್ಕೆ ಇಲ್ಲದಂತೆ ಆಗಿದೆ ಎನ್ನುವುದು ಹೇಗೆ ?, ಇದರ ಹೊರತಾಗಿ ಎಸ್ಟಿ ಅಭಿವೃದ್ಧಿ ನಿಗಮದಲ್ಲಿ ಯಾವುದೆ ಚಟುವಟಿಕೆಗಳು ನಡೆಯುತ್ತಿಲ್ಲಾ ಬದಲಾಗಿ ಎಲ್ಲಾ ಹಣ ಚುನಾವಣೆಗೆ ಬಳಕೆ ಯಾಗಿದೆ ಎಂದುಬಲವಾಗಿ ಖಂಡಿಸಿದರು.

ಮುಖ್ಯಮಂತ್ರಿ ರಾಜೀನಾಮೆ ನೀಡಬೇಕು, ಆರ್ಥಿಕ ವ್ಯವಹಾರ ಸಿಬಿಐ ತನಿಖೆಯಾಗಬೇಕು ಎಂದು ಒತ್ತಾಯಿಸಿದರು ಕಿವಿಗೊಡದ ಹಿನ್ನೆಲೆಯಲ್ಲಿ ಮುತ್ತಿಗೆಗೆ ಮುಂದಾಗಲಾಗಿದೆ ಮುತ್ತಿಗೆ ಕಾರ್ಯಕ್ರದಲ್ಲಿ ಅಶೋಕ ಜೀರೆ, ಅಯ್ಯಾಳಿ ತಿಮ್ಮಪ್ಪ, ಕಿಚಡಿ ಕೊಟ್ರೇಶ, ಶಂಕರ ಮೇಟಿ. ಜಗದೀಶ ಕಮಟಗಿ, ಬಲಗುಣಸಿ ರಾಮಣ್ಣ, ಗುಜ್ಜಲ ಕಿರಣ್,ದ್ವಾರಕೇಶ್, ರೂಪೇಶ ಕುಮಾರ, ಸಾಲಿ ಸಿದ್ಧಯ್ಯಸ್ವಾಮಿ, ತಾರಿಹಳ್ಳಿ ಜಂಬೂನಾಥ, ಶ್ರೀನಿವಾಸ ಬಂಗಾತಿ, ಕಸಾಟಿ ಉಮಾಪತಿ, ಜಗನ್ನಾಥ, ರೇಖಾರಾಣಿ, ಕವಿತಾ, ಭಾರತಿ ಪಾಟೀಲ್, ಅನುರಾಧ, ಚಂದ್ರು ದೇವಲಾಪುರ, ರೇವಣಸಿದ್ಧಪ್ಪ ಸೇರಿದಂತೆ ನೂರಾರು ಸಂಖ್ಯೆಯ ಕಾರ್ಯಕರ್ತರು ಪಾಲ್ಗೊಂಡಿದ್ದರು. ಮುಖಂಡರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

# ವಿವಿಧ ಕಟ್ಟಡ ನಿರ್ಮಾಣ ಕಾರ್ಮಿಕ ಸಂಘಗಳ ರಾಜ್ಯಾದ್ಯಂತ ಹಾಗೂ ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆ




ರಾಯಚೂರು:–

ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ವಿವಿಧ ಕಟ್ಟಡ ನಿರ್ಮಾಣ ಕಾರ್ಮಿಕ ಸಂಘಗಳು ಶುಕ್ರವಾರದಿಂದ ರಾಜ್ಯಾದ್ಯಂತ ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ಆರಂಭಿಸಿದ್ದಾರೆ. ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ CITU, AITUC, INTUC, NCL, HMS, AICCTU,AIUTUC ಹಾಗು TUCC ಸಂಯೋಜಿತ ಸಂಘಗಳಲ್ಲದೆ ಹಲವು ಸ್ವತಂತ್ರ ಸಂಘಗಳು ಇಂದಿನಿಂದ ಜುಲೈ 3 ರವರೆಗೆ ನಡೆಯುವ ಈ ಹೋರಾಟದಲ್ಲಿ ಭಾಗವಹಿಸುತ್ತಿವೆ. ಕಲ್ಯಾಣ ಮಂಡಳಿ ಹಾಗೂ ಕಾರ್ಮಿಕ ಇಲಾಖೆಯಲ್ಲಿ ಸೌಲಭ್ಯಗಳನ್ನು ನೀಡುವಲ್ಲಿ, ವಿದ್ಯಾರ್ಥಿ ವೇತನ ವಿತರಣೆಯಲ್ಲಿ ,ವಿವಿಧ ಬಗೆಗೆ ಟೆಂಡರ್ ಗಳನ್ನು ನೀಡುವಲ್ಲಿ,ನೇಮಕಾತಿಗಳಲ್ಲಿ ವ್ಯಾಪಕ ಭ್ರಷ್ಟಾಚಾರಗಳು ನಡೆಯುತ್ತಿದ್ದು ಅದರಲ್ಲಿ ಅಧಿಕಾರಿಗಳು ನೇರವಾಗಿ ಶಾಮೀಲಾಗಿದ್ದಾರೆ ಇದರ ಬಗ್ಗೆ ಕಠಿಣ ಕ್ರಮ ಕೈಗೊಳ್ಳಬೇಕು. ಮತ್ತು ಎಲ್ಲಖರೀದಿ ಟೆಂಡರ್ ಗಳನ್ನು ನಿಲ್ಲಿಸಬೇಕು. ಹೈಕೋರ್ಟ್ ಆದೇಶದಂತೆ 2021 ಅಧಿಸೂಚನೆಯಂತೆ ಎಲ್ಲ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಧನ ಸಹಾಯ ಬಿಡುಗಡೆ ಮಾಡಬೇಕು, ಸೌಲಭ್ಯಗಳ ಅರ್ಜಿ ಸಲ್ಲಿಸಲು ಆಗುತ್ತಿರುವ ತೊಂದರೆ ಹಾಗೂ ಪಿಂಚಣಿ, ವೈದ್ಯಕೀಯ ಧನಸಹಾಯ ಇತ್ಯಾಧಿಗಳ ಧನ ಸಹಾಯ ನೀಡುವಲ್ಲಿ ಆಗುತ್ತಿರುವ ವಿಳಂಬ ಧೋರಣೆಗಳ ವಿರುದ್ದ ಈ ಹೋರಾಟ ನಡೆಸಲಾಗುತ್ತಿದೆ.

ಇಂದು ಹೋರಾಟದ ಮೊದಲನೆ ದಿನ ರಾಯಚೂರು, ತುಮಕೂರು,ಪಾವಗಡ ಉಡುಪಿ ಕುಂದಾಪುರ, ಬೈಂದೂರು, ದಾವಣಗೆರೆ,ಧಾರವಾಡ, ಕೋಲಾರ ವಿಜಯನಗರ ಜಿಲ್ಲೆಗಳಲ್ಲಿ ಜಂಟಿ ಹೋರಾಟಗಳು ಯಶಸ್ವಿಯಾಗಿ ಜರುಗಿವೆ ಮತ್ತು ನಾಳೆಯಿಂದ ಜುಲೈ 2 ದವರೆಗೆ ಮುಂದುವರೆಯಲಿವೆ ಜುಲೈ 3ರಂದು ಬೆಂಗಳೂರು ಹಾಗೂ ಸುತ್ತಲಿನ ಪ್ರದೇಶದ ಕಾರ್ಮಿಕರು ಕಲ್ಯಾಣ ಮಂಡಳಿ ಮುಂದೆ ಪ್ರತಿಭಟನೆ ನಡೆಸಲಿದ್ದಾರೆ. ಇದಾದ ಬಳಿಕ "ಭ್ರಷ್ಟಚಾರಿಗಳಿಂದ ಕಲ್ಯಾಣ ಮಂಡಳಿ ರಕ್ಷಿಸಿ" "ಬಡ ಕಾರ್ಮಿಕರ ಹಕ್ಕು,ಸೌಲಭ್ಯಗಳನ್ನು ಉಳಿಸಿ" ಎನ್ನುವ ಒಂದು ತಿಂಗಳ ಅಭಿಯಾನ ನಡೆಸಲಾಗುವುದು ಅಂತಿಮವಾಗಿ ಆಗಸ್ಟ ಮೊದಲವಾರದಲ್ಲಿ ಸಾವಿರಾರು ಕಾರ್ಮಿಕರಿಂದ "ಮುಖ್ಯಮಂತ್ರಿ ಮನೆ ಚಲೋ" ಹೋರಾಟವನ್ನು ನಡೆಸಲು

ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿ ನಿರ್ಧರಿಸಲಾಗಿದೆ.

# ಕೃಷ್ಣಾ ನದಿ ತೀರದಲ್ಲಿ ಅಕ್ರಮ ಮಣ್ಣು ಮಾಫಿಯಾ



ಅಥಣಿ:–

ಕೃಷ್ಣಾ ನದಿಯಲ್ಲಿ ನೀರು ಕಡಿಮೆಯಾದರೆ ಸಾಕು, ಆಕ್ರಮ ಚಟುವಟಿಕೆಗಳು ನಡೆಸುವವರಿಗೆ ಸುಗಿಯೋ ಸುಗ್ಗಿ. ಹಿಂದಿನ ವರ್ಷಗಳಲ್ಲಿ ನದಿ ತೀರದ ಅನೇಕ ಗ್ರಾಮಗಳಲ್ಲಿ ಮರಳು ಮಾಫಿಯಾ ರಾಜಾರೋಷವಾಗಿ ನಡೆಯುತ್ತಿತ್ತು. ಆದರೆ ಈ ಬಾರಿ ನದಿಯ ತೀರದ ಗ್ರಾಮಗಳಲ್ಲಿ ಅಕ್ರಮ ಮಣ್ಣು ಸಾಗಿಸುವ ಮಾಫಿಯಾ ವ್ಯವಸ್ಥಿತವಾಗಿ ನಡೆಯುತ್ತಿದೆ.

ಕಳೆದ ಒಂದು ವಾರದಿಂದ ಕೃಷ್ಣಾ ನದಿ ನೀರು ಇಳಿದ ಮೇಲೆ ಉಳಿದ ಫಲವತ್ತಾದ ಮಣ್ಣನ್ನು ತುಂಬಿ ಮಾರಾಟ ಮಾಡುತ್ತಿರುವ ದೊಡ್ಡ ದಂಧೆ ಅವರಖೋಡ, ಹುಲಗಬಾಳ , ಮಹಿಷವಾಡಗಿ, ನಾಗನೂರ ಪಿಕೆ , ನದಿ ಇಂಗಳಗಾವ, ಸಪ್ತಸಾಗರ, ತೀರ್ಥ. ಶಿರಹಟ್ಟಿ ಇನ್ನಿತರ ಗ್ರಾಮಗಳಲ್ಲಿ ವ್ಯವಸ್ಥಿತವಾಗಿ ನಡೆ–ಯುತ್ತಿದ್ದು, ನದಿ ತೀರದ ಅನೇಕ ಗ್ರಾಮಗಳಲ್ಲಿ ಜೆಸಿಬಿ, ಟ್ರ್ಯಾಕ್ಟರ್ ಬುಲ್ಡೋಜರ್ ಸಹಾಯದಿಂದ ಫಲವತ್ತಾದ ಮಣ್ಣನ್ನು ಟ್ರ್ಯಾಕ್ಟರ್ ಮತ್ತು ಟಿಪ್ಪರ್ ಗಳ ಮೂಲಕ ತುಂಬಿ ಬೇರಡೆಗೆ ಸಾಗಿಸುವ ದೃಶ್ಯಗಳು ಸಾಮಾನ್ಯವಾಗಿವೆ.

ತಡ ರಾತ್ರಿಯ ನಂತರ ಆರಂಭವಾಗುವ ಈ ಮಣ್ಣು ಮಾಫಿಯಾ ಯಾವುದೇ ಅಧಿಕೃತ ಇಲಾಖೆಯ ಅನುಮತಿ ಇಲ್ಲದೇ ರಾಜಾರೋಷವಾಗಿ ನಡೆಯುತ್ತಿದ್ದು, ಪೊಲೀಸ್ ಠಾಣೆಗಳ ಮುಂದೆಯೇ ಅಕ್ರಮವಾಗಿ ನದಿ ಮಣ್ಣು ಸಾಗಾಣಿ–ಕೆಯಾಗುತ್ತಿದ್ದರೂ ಕಂಡು ಕಾಣದಂತೆ ಮೌನವಾಗಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿದೆ . ಪೊಲೀಸ್ ಇಲಾಖೆ ಸೇರಿದಂತೆ ಬೇರೆ ಬೇರೆ ಇಲಾಖೆಯ ಅಧಿಕಾರಿಗಳು ಈ ಅಕ್ರಮ ದಂಧೆಯಲ್ಲಿ ಶಾಮೀಲಾಗಿದ್ದಾರೆ ಎಂಬುದು ಸಾರ್ವಜನಿಕರ ಆರೋಪವಾಗಿದೆ. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಅಕ್ರಮ ದಂದೆಗೆ ಕಡಿವಾಣ ಹಾಕದಿರುವುದು ವಿಪರ್ಯಾಸದ ಸಂಗತಿಯಾಗಿದೆ.

ಈ ರೀತಿ ನದಿಯ ಮಣ್ಣನ್ನು ಒಯ್ದರೇ ನದಿಯಲ್ಲಿರುವ ಹೂಳು ಕಡಿಮೆ ನದಿಯ ಸಾಂದ್ರತೆ ಕಡಿಮೆಯಾಗುತ್ತದೆ. ಸವಳು ಜವಳು ಸಮಸ್ಯೆ, ನೆರೆ ಹಾವಳಿ ಸಂದರ್ಭದಲ್ಲಿ ನದಿಯ ಸ್ವರೂಪ ಬದಲಾವಣೆಯಾಗಿ ತೊಂದರೆ ಅನುಭವಿಸಬೇಕಾಗುತ್ತದೆ. ಇದರ ಬಗ್ಗೆ ಅನೇಕ ದುಷ್ಪರಿಣಾಮಗಳು ಗೊತ್ತಿದ್ದರೂ ಕೂಡ ಕೆಲ ದಲ್ಲಾಳಿಗಳು, ಪ್ರಭಾವಶಾಲಿ ವ್ಯಕ್ತಿಗಳು ಇದರಲ್ಲಿ ಪರೋಕ್ಷವಾಗಿ ಭಾಗಿಯಾಗಿ ಮಣ್ಣನ್ನು ಅಧಿಕ ಬೆಲೆಗೆ ರೈತರಿಗೆ ಮತ್ತು ಇಟ್ಟಿಗೆ ತಯಾರಿಕಾ ಘಟಕಗಳಿಗೆ ಮಾರಾಟ ಮಾಡುತ್ತಿದ್ದಾರೆ.

**ನೆರೆಯ ಮಹಾರಾಷ್ಟ್ರ ರಾಜ್ಯಕ್ಕೂ ನಂಟು :**

ನೆರೆಯ ಮಹಾರಾಷ್ಟ್ರದಲ್ಲಿ ಇರುವ ಇಟ್ಟಿಗೆ ತಯಾರಿಕಾ ಘಟಕಗಳಿಗೆ ನದಿ ತೀರದ ಮಣ್ಣು ಬಳಕೆ ಮಾಡುವುದು ನಿಶ್ಚಿತವಾಗಿದ್ದು, ಆದ್ದರಿಂದ ಕೆಲವು ದಲ್ಲಾಳಿಗಳು ಫಲವತ್ತಾದ ಮಣ್ಣನು ನೆರೆಯ ಮಹಾರಾಷ್ಟ್ರಕ್ಕೆ ಸಾಗಿಸಿ ಮಾರಾಟ ಮಾಡುತ್ತಿದ್ದಾರೆ ಎನ್ನುವ ಆರೋಪಗಳು ಕೇಳಿ ಬಂದಿವೆ. ಪ್ರತಿ ಟ್ರ್ಯಾಕ್ಟರ್ ಗೆ ಒಂದು ಸಾವಿರ ರೂ. ಹಾಗೂ ಪ್ರತಿ ಟಿಪ್ಪರಗೂ ಮೂರರಿಂದ ಐದು ಸಾವಿರ ರೂ. ಬೆಲೆ ನಿಗದಿಗೊಳಿಸಿದ್ದು, ಅದನ್ನು ನಿಯಂತ್ರಿಸಲು ಪ್ರಭಾವಿ ವ್ಯಕ್ತಿಯೊಬ್ಬ ಇದ್ದು, ಒಂದು ಟಿಪ್ಪರ್ ಮಣ್ಣು ಒಯ್ದರೇ ಆತನಿಗೆ ಹಣ ನೀಡಬೇಕಾಗುತ್ತದೆ ಎಂದು ಹೆಸರು ಹೇಳಲಿಚ್ಛಿಸದ ನಾಗರಿಕರೊಬ್ಬರು ತಿಳಿಸಿದ್ದಾರೆ.

ರಾಷ್ಟ್ರೀಯ ನದಿ ನೀರು ನಿಯಮಗಳ ಪ್ರಕಾರ ಯಾವುದೇ ನದಿಯ ದಂಡೆಯಲ್ಲಿನ ಮಣ್ಣು ಮತ್ತು ಮರಳು ತೆಗೆಯುವುದು ನಿಷಿದ್ಧ. ಈ ಮಣ್ಣು ಮಾಪಿಯ ನಡೆಯುತ್ತಿರುವ ಪ್ರದೇಶವೆಲ್ಲ ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಸೇರಿದೆ. ವಿಚಿತ್ರವೆಂದರೆ ಅಕ್ರಮ ಮಣ್ಣು ಸಾಗಾಣಿಕೆ ಟಿಪ್ಪರ್ ಗಳು ರಾಜಾರೋಷವಾಗಿ ಪೊಲೀಸ್ ಠಾಣೆಯ ಮುಂದೆ ಹಾದು ಹೋಗುತ್ತಿದ್ದರೂ ಪೊಲೀಸ್ ಅಧಿಕಾರಿಗಳು ಮೂಕ ಪ್ರೇಕ್ಷಕರಾಗಿರುವದು ಹಲವು ಸಂದೇಹಗಳಿಗೆ ಎಡೆ ಮಾಡಿದೆ.ನದಿ ದಂಡೆಯ ಈ ರೀತಿಯ ಮಣ್ಣು ಉತ್ಕೃಷ್ಟ ಮಣ್ಣಾಗಿದ್ದು, ಅದನ್ನು ತೆಗೆದುಕೊಂಡು ಕಪ್ಪು ಮಣ್ಣಿನ ಹೊಲಗಳಿಗೆ ಮಿಶ್ರಣ ಮಾಡಲು ಮತ್ತು ಇಟ್ಟಿಗೆಗಳನ್ನು ತಯಾರಿಸುವ ಘಟಕಗಳಿಗೆ ಒಯ್ಯುತ್ತಾ–ರೆ. ಅಥಣಿ ಮತ್ತು ಕಾಗವಾಡ ತಾಲೂಕುಗಳಲ್ಲಿ 80ಕ್ಕೂ ಅಧಿಕ ಅಕ್ರಮ ಇಟ್ಟಿಗೆ ತಯಾರಿಕಾ ಘಟಕಗಳು ಹುಟ್ಟಿಕೊಂಡಿದ್ದು, ಇಟ್ಟಿಗೆ ತಯಾರಿಸಲು ನದಿ ತೀರದ ಈ ಕೆಂಪು ಮಣ್ಣು ಅತ್ಯಧಿಕವಾಗಿ ಬೇಕಾಗುವದರಿಂದ ಈ ಮಣ್ಣಿಗೆ ಬಂಗಾರದ ಬೆಲೆ ಬಂದಿದ್ದು, ಪ್ರತಿನಿತ್ಯ 100 ಕ್ಕೂ ಅಧಿಕ ಟ್ರಿಪ್ ಫಲವತ್ತಾದ ಮಣ್ಣು ಇಲ್ಲಿಂದ ರವಾನೆಯಾಗುತ್ತಿದೆ. ಈಗ ಮಧ್ಯ ರಾತ್ರಿಯಾದರೆ ಈಗ ಪಟ್ಟಣದಲ್ಲಿ ಹಾದು ಹೋಗಿರುವ ಹೆದ್ದಾರಿಯಲ್ಲಿ ಮಣ್ಣು ಹೊತ್ತ ಇದೇ ಟಿಪ್ಪಗಳ ಅಬ್ಬರ ಕೇಳಿ ಬರುತ್ತಿದೆ. ನದಿ ದಡದ ಗ್ರಾಮಗಳಲ್ಲಿ ಜೆಸಿಬಿ, ಟ್ರ್ಯಾಕ್ಟರ್, ಟಿಪ್ಪರ್ ಸಾಲುಗಟ್ಟಿ ನಿಂತಿವೆ. ಇವುಗಳ ಸದ್ದಿಗೆ ಮತ್ತು ಶರವೇಗದಲ್ಲಿ ಹೋಗುವ ವಾಹನಗಳ ರಬಸಕ್ಕೆ ಗ್ರಾಮಸ್ಥರು ಆತಂಕ ಪಡುತ್ತಿದ್ದಾ–ರೆ. ಇಂತಹ ಅಕ್ರಮ ಮಣ್ಣು ಮಾಫಿಯಾದಲ್ಲಿ ಭಾಗಿಯಾದ ವ್ಯಕ್ತಿಗಳನ್ನು ಬಂಧಿಸಿ, ತಕ್ಷಣವೇ ಈ ಆಕ್ರಮ ದಂಧೆಯನ್ನು ನಿಲ್ಲಿಸಿ ಎಂದು ಪ್ರಜ್ಞಾವಂತ ನಾಗರಿಕರು ಆಗ್ರಹಿಸಿದ್ದಾರೆ.

ಈ ವಿಷಯ ಈಗಷ್ಟೇ ನನ್ನ ಗಮನಕ್ಕೆ ಬಂದಿದ್ದು, ನದಿಯ ಮಣ್ಣನ್ನು ಅಕ್ರಮವಾಗಿ ಸಾಗಿಸುವುದು ಅಪರಾಧ. ಕೂಡಲೇ ನಮ್ಮ ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿ ಮಣ್ಣು ಮಾಫಿಯಾವನ್ನು ನಿಲ್ಲಿಸಿ, ಅಕ್ರಮ ಮಣ್ಣು ಸಾಗಾಣಿಕೆಯಲ್ಲಿ ಭಾಗಿಯಾದವರ ವಿರುದ್ಧ ಶಿಸ್ತು ಕ್ರಮಕ್ಕೆ ಸೂಚಿಸುತ್ತೇನೆ.

**– ಡಾ. ಭೀಮಾಶಂಕರ ಗುಳೇದ,**
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ,
ಬೆಳಗಾವಿ

ನದಿಯ ದಡದಲ್ಲಿನ ಮಣ್ಣು ತೆ–ಗೆದು ಬೇರೆ ಕಡೆಗೆ ಸಾಗಾಣಿಕೆ ಮಾಡುವುದು ಕಾನೂನು ಬಾಹಿರ. ಈ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡು ಅಕ್ರಮ ಮಣ್ಣು ಸಾಗಾಣಿಕೆಗೆ ಕಡಿವಾಣ ಹಾಕಲು ತಹಶೀಲ್ದಾರ್ ಅವರಿಗೆ ಸೂಚನೆ ನೀಡಲಾಗುವುದು.

**– ಎಸ್ ಎಸ್ ಸಂಪಗಾವಿ,**
ಉಪ ವಿಭಾಗಾಧಿಕಾರಿ, ಚಿಕ್ಕೋಡಿ.

# ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ ಅಚ್ಚುಕಟ್ಟಾಗಿ ನಡೆಯಲಿ: ಅಪರ ಜಿಲ್ಲಾಧಿಕಾರಿ



ಹೊಸಪೇಟೆ (ವಿಜಯನಗರ):–

ವಿಜಯನಗರ ಜಿಲ್ಲೆಯ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ–2024ಯು ಅಚ್ಚುಕಟ್ಟಾಗಿ ನಡೆಯುವಂತೆ ಅಗತ್ಯ ಕ್ರಮ ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಅನು ರಾಧ ಜಿ ಅವರು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಜಿಲ್ಲಾಡಳಿತ ಭವನದಲ್ಲಿನ ವಿಡಿಯೋ ಸಂವಾದ ಸಭಾಂಗಣದಲ್ಲಿ ಜೂನ್ 27ರಂದು ನಡೆದ ಕರ್ನಾಟಕ ಶಿಕ್ಷಕರ ಅರ್ಹತಾ ಪರೀ–ಕ್ಷೆಯ ಪೂರ್ವಸಿದ್ಧತಾ ಸಭೆಯಲ್ಲಿ ಅವರು ಮಾತನಾಡಿದರು. ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಯ ಸಂಬಂಧ ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು ಈ ಹಿಂದೆ ವಿಡಿಯೋ ಸಂವಾದ ನಡೆಸಿ ಆಯಾ ಜಿಲ್ಲೆಗಳಲ್ಲಿ ಈ ಪರೀಕ್ಷೆಯು ಸುಗಮವಾಗಿ ನಡೆಯಬೇಕು ಎಂದು ಸೂಚಿಸಿದಂತೆ ಎಲ್ಲಾ ರೀತಿಯ ಅಗತ್ಯ ಕ್ರಮಕ್ಕೆ ಸಂಬಂಧಿಸಿದ ಅಧಿಕಾರಿಗಳು ಮುಂದಾಗಬೇಕು ಎಂದು ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಪರಿಶ್ರಮವಹಿಸಿ ಸತತ ಅಧ್ಯಯನ ಮಾಡಿದ ಯಾವುದೇ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಅನ್ಯಾಯವಾಗಬಾರದು. ಪರೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡ ಅಧಿಕಾರಿಗಳು ಮತ್ತು ಸಿಬ್ಬಂದಿಯು ಇಂತಹ ಸಾಮಾಜಿಕ ಕಾಳಜಿಯೊಂದಿಗೆ ಕಾರ್ಯನಿರ್ವಹಿಸಬೇಕು. ಪರೀಕ್ಷೆಯಲ್ಲಿ ಯಾವುದೇ ರೀತಿಯ ಅವ್ಯವಹಾರ ನಡೆ–ಯದಂತೆ ಸಾಕಷ್ಟು ಮುನ್ನೆಚ್ಚರಿಕೆ ವಹಿಸಬೇಕು ಎಂದು ತಿಳಿಸಿದರು. ಪರೀಕ್ಷಾ ಕೇಂದ್ರಗಳಲ್ಲಿ ಅವ್ಯವಹಾರಗಳನ್ನು ತಡೆಗಟ್ಟಲು ಸೂಕ್ತ ಕ್ರಮಕ್ಕಾಗಿ ಮತ್ತು ಪ್ರತಿ ಪರೀಕ್ಷಾ ಕೇಂದ್ರಗಳ ವ್ಯಾಪ್ತಿಯಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಂರು ಬರುವ ಹಿತದೃಷ್ಟಿಯಿಂದ ಈ ಪರೀಕ್ಷೆ ನಡೆಯುವ 15 ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ಆವರಣವನ್ನು ನಿರ್ಬಂಧಿತ ಪ್ರದೇಶ ಎಂದು ಘೋಷಿಸಿ ಜಿಲ್ಲಾಧಿಕಾರಿಗಳು ಈಗಾಗಲೇ ಆದೇಶ ಹೊರಡಿಸಿದ್ದಾರೆ. ಈ ಪರೀಕ್ಷಾ ಗೌಪ್ಯ ಸಾಮಗ್ರಿಗಳ ಬಂಡಲ್‌ಗಳನ್ನು ಸ್ವೀಕರಿಸಿ ಖಜಾನೆಯ ಭದ್ರತಾ ಕೊಠಡಿಯಲ್ಲಿ ಅಭಿರಕ್ಷಿಸುವ ಹಾಗೂ ಪರೀಕ್ಷಾ ದಿನದಂದು ಮಾರ್ಗಾಧಿಕಾರಿಗಳಿಗೆ ವಿತರಿಸುವ ಸಂಬಂಧ ಜಿಲ್ಲಾಧಿಕಾರಿಗಳು ತ್ರಿಸದಸ್ಯ ಸಮಿತಿ ರಚಿಸಿದ್ದಾರೆ ಎಂದು ಅಪರ ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದರು. ವಿಜಯನಗರ ಜಿಲ್ಲೆಯ ಒಟ್ಟು 15 ಪರೀಕ್ಷಾ ಕೇಂದ್ರಗಳಲ್ಲಿ ಜೂನ್ 30ರಂದು ಪರೀ–ಕ್ಷೆ ನಡೆಯಲಿದೆ. ಅಂದು 1ನೇ ಅವಧಿಯ ಸಮಯ ಬೆಳಗ್ಗೆ 9.30 ರಿಂದ ಮಧ್ಯಾಹ್ನ 12ರವರೆಗೆ ಇರುತ್ತದೆ. 2ನೇ ಅವಧಿಯ ಸಮಯ ಮಧ್ಯಾಹ್ನ 2 ಗಂಟೆಯಿಂದ ಸಂಜೆ 4.30ರವರೆಗೆ ಇರುತ್ತದೆ. ಅಂದು ಆರು ಅಧಿಕಾರಿಗಳು ಮಾರ್ಗಾಧಿಕಾರಿಗಳಾಗಿ ಕಾರ್ಯನಿರ್ವಹಿಸಲಿದ್ದಾರೆ.

ಪರೀಕ್ಷೆಗೆ ಮುಖ್ಯ ಅಧೀಕ್ಷರ ನೇಮಕ ಮಾಡಲಾಗಿದೆ. ಜೊತೆಗೆ ಜಾಗೃತ ದಳವನ್ನು ನೇಮಕ ಮಾಡಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ವಿಷಯ ಪರಿವೀಕ್ಷಕರಾದ ಹೆಚ್.ಎಂ.ಹುಲಿಬಂಡಿ ಅವರು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ತಹಸೀಲ್ದಾರ ವಿಶ್ವಜಿತ್ ಮೆಹತಾ, ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಹರೀಶ್, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ, ಪರೀಕ್ಷೆಗೆ ನಿಯೋಜನೆಗೊಂಡ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮುಖ್ಯ ಅಧೀಕ್ಷಕರು ಹಾಗೂ ಇನ್ನೀತರರು ಇದ್ದರು.

# ಅತ್ಯಾಚಾರಕ್ಕೊಳಗಾದ ಗರ್ಭಿಣಿ ಬಾಲಕಿ ಸಾವು: ದಲಿತ ಸೇನೆಯಿಂದ ಹಠಾತ್ ರಸ್ತೆ ತಡೆ ಚಳುವಳಿ



ಕಲಬುರಗಿ:–

ಅತ್ಯಾಚಾರಕ್ಕೆ ಒಳಗಾಗಿ ಗರ್ಭಿಣಿಯಾಗಿದ್ದ ಅಪ್ರಾಪ್ತ ವಯಸ್ಸಿನ ಬಾಲಕಿಯು ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು, ಇದರಿಂದ ಉದ್ರಿಕ್ತಗೊಂಡ ದಲಿತ ಸೇನೆಯ ಕಾರ್ಯಕರ್ತರು ಶುಕ್ರವಾರ ಖ್ವಾಜಾ ಬಂದೇ ನವಾಜ್ ಆಸ್ಪತ್ರೆ ಮುಂದೆ ರಸ್ತೆ ತಡೆ ಚಳುವಳಿ ಮಾಡುವ ಮೂಲಕ ಆಕ್ರೋಶ ಹೊರಹಾಕಿದರು.

ದಲಿತ ಸೇನೆಯ ರಾಜ್ಯಾಧ್ಯಕ್ಷ ಹಾಗೂ ನ್ಯಾಯವಾದಿ ಹನುಮಂತ್ ಯಳಸಂಗಿ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಹಲವಾರು ಕಾರ್ಯಕರ್ತರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ದಲಿತ ಸೇನೆಯ ಜಿಲ್ಲಾಧ್ಯಕ್ಷ ಮಂಜುನಾಥ್ ಭಂಡಾರಿ ಅವರು ಮಾತನಾಡಿ, ಬಾಲಕಿ ಮೃತಪಟ್ಟಿದ್ದು, ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರವಾಗಿದೆ. ಪೋಲಿಸರು ಸಮರ್ಪಕವಾಗಿ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಿ, ಅವರಿಗೆ ಎನ್‌ಕೌಂಟರ್ ಮಾಡಬೇಕು ಎಂದು ಒತ್ತಾಯಿಸಿದರು. ಬಾಲಕಿಯ ತಾಯಿಯ ಹೇಳಿಕೆಯಂತೆ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರವಾಗಿದೆ ಎನ್ನುವ ಅನುಮಾನ ಬರುತ್ತದೆ. ಕಾರಿನಲ್ಲಿ ನಮ್ಮ ಪ್ರದೇಶದಲ್ಲಿನ ಐದಾರು ಜನರು ವಾರಕ್ಕೆರಡು ಬಾರಿ ಬಂದು ಬಾಲಕಿಯನ್ನು ಬಲವಂತದಿಂದ ಕರೆದುಕೊಂಡು ಹೋಗುತ್ತಿದ್ದರು. ಬಾಲಕಿಯು ಎಂಟು ತಿಂಗಳು ಗರ್ಭಿಣಿ ಆಗಿದ್ದು, ನಿನ್ನೆ ಬಾಲಕಿಗೆ ಕೆಬಿಎನ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಬೆಳಿಗ್ಗೆ 7 ಗಂಟೆಗೆ ಬರುತ್ತೇವೆ ಎಂದು ಬಾಲಕಿಯನ್ನು ದಾಖಲಿಸಿದವರು ಹೇಳಿ ಹೋದವರು ಬಂದಿಲ್ಲ. ಚಿಕಿತ್ಸೆ ಫಲಿಸದೇ ಬಾಲಕಿಯು ಮೃತಪಟ್ಟಿದ್ದಾಳೆ ಎಂದು ಅವರು ತೀವ್ರ ಆತಂಕ ಹೊರಹಾಕಿದರು. ಬಾಲಕಿಯ ತಾಯಿಗೆ ಜೀವ ಬೆದರಿಕೆಯನ್ನು ಆರೋಪಿಗಳು ಹಾಕಿದ್ದಾರೆ. ನನ್ನ ಕಾಕಾನ ಪುತ್ರನೂ ಅದರಲ್ಲಿದ್ದಾನೆ. ಆತನ ಹೆಸರು ಹೇಳಿದರೆ ನಿನಗೆ ಜೀವ ಸಹಿತ ಉಳಿಸುವುದಿಲ್ಲ ಎಂದು ಬೆದರಿಕೆ ಹಾಕಿದ್ದು, ಈ ಕುರಿತು ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಬೇಕು ಎಂದು ಅವರು ಒತ್ತಾಯಿಸಿದರು.

Editor:S.K.Wadeyar,#378/379, "MAYAGAPPA COMPLEX" 1st Stage 6th Phase Industrial Town west of chord Road Rajajinagar Bengaluru-560044.Karnataka.
Publisher:S.K.Wadeyar,#378/379, "MAYAGAPPA COMPLEX" 1st Stage 6th Phase Industrial Town west of chord Road Rajajinagar Bengaluru-560044.Karnataka.
Printer:SUCHITHRA PRINTER's & PUBLISHER's,#378/379, "MAYAGAPPA COMPLEX" 1se Stage 6th Phase Industrial Town west of chord Road Rajajinagar Bengaluru-560044.Karnataka.
Owner:S.K.Wadeyar,#378/379, "MAYAGAPPA COMPLEX" 1se Stage 6th Phase Industrial Town west of chord Road Rajajinagar Bengaluru-560044.Karnataka.